# 16

# ಅದ್ಭುತಗಳ ಮೊದಲ ಗುಂಪು

## (8:1-17)

ಈ ಅಂಶದವರೆಗೆ ಮತ್ತಾಯನ ಸುವಾರ್ತೆಯು ಯೇಸುವಿನ ಸೇವೆ ಅದು ಬೋಧಿಸುವದು, ಸಾರುವದು, ಮತ್ತು ಗುಣಪಡಿಸುವದು ಎಂದು ಸುವಾರ್ತೆಯಲ್ಲಿ ಚಿತ್ರಿಕರಿಸಲಾಗಿದೆ (4:23; ನೋಡಿರಿ 9:35). ಈಗ ಮತ್ತಾಯನು ಹೆಚ್ಚಾಗಿ ಸ್ವಸ್ಥತೆ ಒಳಗೊಂಡಿರುವ ಅನೇಕ ಅದ್ಭುತಗಳ ಸಂಗ್ರಹವನ್ನು ಕೊಡುತ್ತಿದ್ದಾನೆ (ಅಧ್ಯಾಯಗಳು 8; 9). ಅದ್ಭುತಗಳನ್ನು ಮೂರು ಜೋಡಣೆಯಿಂದ ಮೂರು ಗುಂಪುಗಳನ್ನಾಗಿ ಮಾಡಲಾಗಿದೆ, ಏಳನೆಯ ಅದ್ಭುತದ ಕಂತಿನೊಂದಿಗೆ ಎರಡು ಅದ್ಭುತಗಳನ್ನು ಒಂದೇ ಗುಂಪಿನಲ್ಲಿ ಸೇರಿಸಲಾಗಿದೆ. ವಿವರವಾಗಿ ಹೇಳಿರುವ ಅದ್ಭುತಗಳ ಸಂಖ್ಯೆ ಹತ್ತು ಅದ್ಭುತಗಳಾಗಿವೆ. ಮೂರು ಜೋಡಿಯ ಅದ್ಭುತಗಳು (8:1-17; 8:23-9:8; 9:18-34) ಅವುಗಳನ್ನು ಎರಡು ಬೋಧನೆಯ ಭಾಗಗಳನ್ನಾಗಿ ವಿಂಗಡಿಸಲಾಗಿದೆ ಅವುಗಳು ಶಿಷ್ಯತ್ವದ ಕುರಿತು ಒತ್ತಿಹೇಳುತ್ತವೆ (8:18-22; 9:9-17).

ಯೇಸು ಈ ಅದ್ಭುತಗಳನ್ನು ಯಾಕೆ ಮಾಡಿದನು? ಅವುಗಳನ್ನು ನೆರವೇರಿಸುವ ಉದ್ದೇಶವೇನಾಗಿತ್ತು? ಕರುಣೆಯುಳ್ಳ ಯೇಸು ಎಲ್ಲರನ್ನು ಗುಣಪಡಿಸಲಿಲ್ಲ ಅಥವಾ ಸತ್ತವರೆಲ್ಲರನ್ನು ಎಬ್ಬಿಸಲಿಲ್ಲ, ಆತನು ಮಾಡಿರುವ ಅದ್ಭುತಗಳನ್ನು ಯಾಕೆ ಆತನು ಅವುಗಳನ್ನು ಮಾಡಿದನು?

ಮೊದಲನೆಯದಾಗಿ ಯೇಸು ತನ್ನ ಆಶ್ಚರ್ಯಕರವಾದ ಕಾರ್ಯಗಳನ್ನು ಮಾನವರ ದುಃಖವನ್ನು ತೆಗೆದುಹಾಕುವದಕ್ಕಾಗಿ ಮಾಡಿದನು ಮತ್ತು ಸಾಧ್ಯವಾಗುವಾಗ ಅವರ ಅಗತ್ಯತೆಗಳಿಗೆ ಸ್ಪಂದಿಸುತ್ತಿದ್ದನು. ಎರಡನೆಯದಾಗಿ, ಆತನು ಮೆಸ್ಸೀಯನೆಂದು ಹೇಳಿಕೊಂಡದ್ದಕ್ಕೆ ಆತನು ಮಹತ್ಕಾರ್ಯಗಳು ಧರ್ಮಸಮ್ಮತವಾದ ಸಾಕ್ಷಿಯನ್ನು ಒದಗಿಸುತ್ತದೆ (ಯೋಹಾನ 20:30, 31) ಮತ್ತು ಹಳೆ ಒಡಂಬಡಿಕೆಯ ಪ್ರವಾದನೆಗಳನ್ನು ನೆರವೇರಿಸುವದು ಆತನಿಗೆ ಸಂಪೂರ್ಣವಾಗಿ ಸಂಬಂಧವುಳ್ಳದ್ದಾಗಿದೆ (ಯೆಶಾಯ 29:18, 19; 35:4-6).

ಯೇಸು ತಾನಾಗಿಯೇ ಅದ್ಭುತಗಳನ್ನು ಮಾಡಲು ಆಸಕ್ತಿವಹಿಸಲಿಲ್ಲ, ಆತನ ಸೇವೆ ಯುದ್ಧಕ್ಕೂ ತಾನೊಬ್ಬನ್ನೇ ಒಂದು ಬೆಳಕಿನ ಚುಕ್ಕೆಯಾಗಿರುವದನ್ನು ದೂರವಿಟ್ಟನು. ಆತನು ತನ್ನ ಚಮತ್ಕಾರದ ಕಾರ್ಯಗಳಿಂದ ಜನರನ್ನು ಮತಾಂತರ ಮಾಡುವದು ಆತನಿಗೆ ಬೇಕಾಗಿರಲಿಲ್ಲ. ಆತನು ಯಾರಾಗಿದ್ದಾನೋ ಅವನ ಮೇಲೆ ಅವರ ನಂಬಿಕೆಯನ್ನು ಕೇಂದ್ರಿಕರಿಸಬೇಕಾಗಿತ್ತು. ಪೌಲನು ಹೇಳಿದಂತೆ, "ನಂಬಿಕೆ ಕೇಳಿಸಿಕೊಳ್ಳುವದರಿಂದ ಬರುತ್ತದೆ ಮತ್ತು ಕ್ರಿಸ್ತನ ವಾಕ್ಯಗಳನ್ನು ಕೇಳುವದರಿಂದ ಬರುತ್ತದೆ" (ರೋಮಾಪುರ 10:17).

ಮುಂದಿನ ವಿಷಯಕ್ಕೆ ಸಂಬಂಧಿಸಿದಂತೆ, ಆತನ ಅಪೊಸ್ತಲರು ಅದ್ಭುತಗಳನ್ನು ಮಾಡುತ್ತಾರೆಂದು ಯೇಸು ಪ್ರಕಟಿಸಿದನು. ಅವುಗಳು "ಸೂಚನೆಗಳಾಗಿ" ಕಾರ್ಯಮಾಡುತ್ತವೆ (ಮಾರ್ಕ 16:20; ನೋಡಿರಿ ಇಬ್ರಿಯ 2:1-4), ಆತನು ಮಾಡಿದ ಹಾಗೆಯೇ. ಯಾವಾಗ ಆತನ ವಾಗ್ದಾನಗಳು ನೆರವೇರಿದವೋ, ಆಗ ಅಪೊಸ್ತಲರು ಅಂಥಹ ಅದ್ಭುತಗಳ ಗುರುತುಗಳನ್ನು ಕಂಡು ಅವರು ಸಾರುವ ವಾಕ್ಯವು ಅದು ದೇವರಿಂದ ಬಂದದ್ದು ಎಂದು ತಿಳಿದುಕೊಂಡರು (2 ಕೊರಿಂಥ 12:12).

ಮತ್ತಾಯ 8:1-17 ಹೇಳುತ್ತದೆ, ಯೇಸು ಮೂರು ಅದ್ಭುತಗಳನ್ನು ಮಾಡಿದನು ಎಂದು ಹೇಳುತ್ತದೆ. ಈ ಅದ್ಭುತಗಳಿಂದ ಲಾಭ ಹೊಂದಿದ ಈ ಜನರು ಯೆಹೂದ್ಯರಿಂದ ಬಹಳ ಕೀಳಾಗಿ ಕಾಣಿಸಿಕೊಂಡಿರುವ ಜನರಾಗಿದ್ದರು. ಯೇಸು ಒಬ್ಬ ಕುಷ್ಟರೋಗಿಯನ್ನು, ಅನ್ಯನನ್ನು,

ಮತ್ತು ಒಬ್ಬ ಸ್ತ್ರೀಯನ್ನು ಸ್ವಸ್ತಮಾಡಿದನು.

## ಒಬ್ಬ ಕುಷ್ಠರೋಗಿಯನ್ನು ಸ್ವಸ್ಥಮಾಡಿದ್ದು (8:1-4)

**[1]ಆತನು ಬೆಟ್ಟದಿಂದಿಳಿದು ಬರುವಾಗ ಜನರು ಗುಂಪುಗುಂಪಾಗಿ ಆತನ ಹಿಂದೆ ಹೋದರು.**
**[2]ಒಬ್ಬ ಕುಷ್ಠರೋಗಿಯು ಯೇಸುವಿನ ಬಳಿಗೆ ಬಂದು ಆತನಿಗೆ ಅಡ್ಡಬಿದ್ದು - ಸ್ವಾಮೀ, ನಿನಗೆ**
**ಮನಸ್ಸಿದ್ದರೆ ನನ್ನನ್ನು ಶುದ್ಧ ಮಾಡಬಲ್ಲೆ ಅಂದನು. [3]ಆತನು ಕೈ ನೀಡಿ ಅವನನ್ನು ಮುಟ್ಟಿ-ನನಗೆ**
**ಮನಸ್ಸುಂಟು; ಶುದ್ಧವಾಗು ಅಂದನು. ಕೂಡಲೆ ಅವನ ಕುಷ್ಠವು ವಾಸಿಯಾಯಿತು. [4]ಆಗ**
**ಯೇಸು ಅವನಿಗೆ - ಯಾರಿಗೂ ಹೇಳಬೇಡ ನೋಡು; ಆದರೆ ಹೋಗಿ ಯಾಜಕನಿಗೆ ನಿನ್ನ ಮೈ ತೋರಿಸಿ ಮೋಶೆ ನೇಮಿಸಿದ ಕಾಣಿಕೆಯನ್ನು ಕೊಡು; ಅದು ಜನರಿಗೆ ಸಾಕ್ಷಿಯಾಗಲಿ ಎಂದು ಹೇಳಿದನು.**

**ವಚನ 1.** ಅಧ್ಯಾಯ 4ರ ಮುಕ್ತಾಯದಲ್ಲಿ "ದೊಡ್ಡ ಜನರ ಗುಂಪುಗಳು" ಆತನನ್ನು ಹಿಂಬಾಲಿಸುತ್ತಿದ್ದರು ಎಂದು ಸೂಚಿಸಲಾಗಿದೆ (4:25). ಅಧ್ಯಾಯ 5ರ ಆರಂಭದಲ್ಲಿ ಮುಂದೆ ತಿಳಿಸಲಾಗಿದೆ ಜನರು ಹಿಂಬಾಲಿಸುತ್ತಿರುವಾಗ ಆತನು ತಕ್ಷಣವೇ ಗ್ರಹಿಸಿಕೊಂಡು ಬೆಟ್ಟವನ್ನೇರಿ ಆತನ ಶಿಷ್ಯರಿಗೆ ಉಪದೇಶ ಮಾಡುವ ಅವಕಾಶವನ್ನು ಆತನು ತಿಳಿದುಕೊಂಡನು. ಈ ಸಂಭಾಷಣೆ ಮುಂದುವರಿಯುತ್ತಾ ಇರುವಲ್ಲಿ (ಅಧ್ಯಾಯಗಳು 5-7), ಆತನು **ಬೆಟ್ಟದಿಂದಿಳಿದು ಕೆಳಗೆ ಬಂದನು.** ಅದಕ್ಕೆ ಸರಿಸಮವಾಗಿರುವ ಮಾತನ್ನು ವಿಮೋಚನಕಾಂಡ 34:29ರಲ್ಲಿ ನೋಡುತ್ತೇವೆ, ಮೋಶೆಯು ಸಿನಾಯಿ ಪರ್ವತದಿಂದ ದಶಾಜ್ಞೆಗಳೊಂದಿಗೆ ಕೆಳಗೆ ಇಳಿದು ಬಂದನು. ನಿಜಾಂಶವೇನೆಂದರೆ ಯೇಸು ಇನ್ನು ದೊಡ್ಡ ಗುಂಪು ಆತನನ್ನು ಹಿಂಬಾಲಿಸುತ್ತಿದ್ದಾರೆ ಆತನ ಅದ್ಭುತಗಳ ಕುರಿತು ಅನೇಕರು ಸಾಕ್ಷಿಯಾಗಿದ್ದಾರೆ. ಆ ಅದ್ಭುತಗಳ ವಿಷಯದಲ್ಲಿ ಅದ್ಭುತಗಳ ಪ್ರಾರಂಭ ಮತ್ತು ಅಂತ್ಯದಲ್ಲಿ ಜನರ ದೊಡ್ಡ ಗುಂಪುಗಳು ಆತನ ಸುತ್ತಲು ಇದ್ದರು ಎಂದು ತಿಳಿಸುತ್ತದೆ (8:1; 9:36-38).

**ವಚನ 2.** ಕುಷ್ಠರೋಗವು ಯೇಸುವಿನ ಕಾಲದಲ್ಲಿಯೂ ಅದೇ ರೀತಿಯಾಗಿ ಹಳೆ ಒಡಂಬಡಿಕೆಯ ಕಾಲದಲ್ಲಿಯೂ ಬಲಹೀನ ಮಾಡುವ ವಿಪತ್ತು ಕಾಯಿಲೆಯಾಗಿತ್ತು (ಯಾಜಕಕಾಂಡ 13; 14; ಅರಣ್ಯಕಾಂಡ 12:10, 12). ವೈದ್ಯಕೀಯ ತಜ್ಞರು ಸತ್ಯವೇದ ದಲ್ಲಿರುವ ಕುಷ್ಠರೋಗವು ಇಂದಿನ ದಿನದ ಕುಷ್ಠರೋಗವು ಒಂದೇಯಾಗಿದೆಯೋ ಇಲ್ಲವೋ ಎಂಬುದನ್ನು ತಿಳಿಯಲು ಅವುಗಳನ್ನು ವಿಭಾಗಿಸಿದ್ದಾರೆ. ಇದು "ಕುಷ್ಠ" ಎಂದು (*lepra*) ಹೇಳುವಾಗ ಇದು ಒಂದೇ ರೋಗವಲ್ಲ ಇದರೊಂದಿಗೆ ಅನೇಕ ರೋಗಗಳು ಇರುವದನ್ನು ಚರ್ಮರೋಗಗಳು ಇರುವದನ್ನು ಸೂಚಿಸುತ್ತದೆ (ಚರ್ಮರೋಗ, ಇಸಬುರೋಗ, ಕ್ಷಯ ರೋಗದ ಕುಷ್ಠ, ಬಿಳಿ ಚಮ್ಮವಾಗುವ ರೋಗ, ಮತ್ತು ಚರ್ಮಕೆಡಿಸುವ ರೋಗ).

ಆಶ್ಚರ್ಯವಾಗಿ, ಈ **ಕುಷ್ಠರೋಗಿಯು** ಧೈರ್ಯದಿದ ಯೇಸುವನ್ನು ಕೇಳುತ್ತಿದ್ದಾನೆ. ಧರ್ಮಶಾಸ್ತ್ರದ ನಿಯಮದಂತೆ, ಅಶುದ್ಧನಾಗಿರುವ ಕುಷ್ಠನು ಸಮಾಜದ ಹೊರಗಡೆ ಇರಬೇಕಾಗಿತ್ತು ಮತ್ತು ಅವನು ತನ್ನ ಕೈಗಳನ್ನು ಮೇಲಕ್ಕೆತ್ತಿ ಬಾಯಿಂದ "ಅಶುದ್ಧನು, ಅಶುದ್ಧನು," ಎಂದು ಕೂಗಿ ನನ್ನ ಕಡೆ ಯಾರು ಬರಬೇಡಿರಿ ಎಂದು ಎಚ್ಚರಿಸುತ್ತಿದ್ದನು! (ಯಾಜಕಕಾಂಡ 13:45, 46; ಅರಣ್ಯಕಾಂಡ 5:2-4). ಯೇಸು ಹತ್ತು ಜನ ಕುಷ್ಠರೋಗಿಗಳನ್ನು ವಾಸಿ ಮಾಡುವಾಗ ಅವರು "ದೂರ ನಿಂತುಕೊಂಡಿದ್ದರು" (ಲೂಕ 17:12). ಈ ಕುಷ್ಠನು ಬಂದು ಆತನ ಮುಂದೆ ಅಡ್ಡಬಿದ್ದನು. ಇದರ ಬದಲಾಗಿ KJV ಹೇಳುತ್ತದೆ. ಆ ವ್ಯಕ್ತಿಯು ಯೇಸುವನ್ನು "ಆರಾದಿಸಿದನು" ಎಂದು ಹೇಳುತ್ತದೆ. ಗ್ರೀಕ್ ಕ್ರಿಯಾಪದ *proskuneō* ಇದು ಹೇಳುವದೇನೆಂದರೆ ಕೆಲವು ಕಡೆ ಇದನ್ನು ದೇವರ ಮುಂದೆ ಬೊಗ್ಗಿ ಆರಾಧಿಸಿದರು ಅಥವಾ ಯೇಸುವಿಗೆ ಮೆಸ್ಸಿಯ ರಾಜನಂತೆ ಆತನನ್ನು ಗೌರವಿಸಿದರು ಎಂದು ಈ ಪದ ಹೇಳುತ್ತದೆ (2:2ರ ಮೇಲೆ

ಇರುವ ವ್ಯಾಖ್ಯಾನ ನೋಡಿರಿ).

ಕುಷ್ಠನು ಯೇಸುವಿಗೆ ತನ್ನನ್ನು ಗುಣಪಡಿಸಲು ಕೇಳಿದನು, ಹೀಗೆ ಹೇಳುತ್ತಾನೆ, **ಸ್ವಾಮೀ, ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧ ಮಾಡಬಲ್ಲೆ ಅಂದನು.** ಅವನು ಯೇಸುವಿನಲ್ಲಿ ಸಂಶಯ ವ್ಯಕ್ತಪಡಿಸುತ್ತಿಲ್ಲ ಅವನನ್ನು ಗುಣಪಡಿಸಲು ಸಾಮರ್ಥ್ಯ ಕೇಳುತ್ತಿದ್ದಾನೆ; ತನಗೋಸ್ಕರ ಅದ್ಭುತ ಮಾಡಲು ಕರ್ತನ ಚಿತ್ತವನ್ನು ಇವನು ಪ್ರಶ್ನೆಮಾಡುತ್ತಿದ್ದಾನೆ. ಈ ಪ್ರಶ್ನೆಗೆ ಕಾರಣ ಹೀಗಿತ್ತು ಯಾಕೆಂದರೆ ಅಂದಿನ ಯೆಹೂದ್ಯ ಸಂಪ್ರದಾಯದಲ್ಲಿ, ಕುಷ್ಠವು ಪಾಪಕ್ಕೆ ಶಿಕ್ಷೆಯಾಗಿತ್ತು. ಇಂಥಹ ಪಾಪಗಳಲ್ಲಿ ದೈವೀಕ ಸಂಪ್ರದಾಯದಲ್ಲಿ, ಕುಷ್ಟವು ಪಾಪಕ್ಕೆ ಶಿಕ್ಷೆಯಾಗಿತ್ತು. ಇಂಥಹ ಪಾಪಗಳಲ್ಲಿ ದೈವೀಕ ಹೆಸರನ್ನು ಅಪವಿತ್ರಗೊಳಿಸುವದು, ಲೈಂಗಿಕ ಅನಾಚಾರ, ಕೊಲೆ, ವಿಗ್ರಹ ರಾಧನೆ, ಮತ್ತು ವಿಶೇಷವಾಗಿ ಇನ್ನೊಬ್ಬರನ್ನು ದೂಷಿಸುವದು ಆಗಿದ್ದವು.[1] ಕುಷ್ಠದ ಜೊತೆಯಾಗಿ ಇನ್ನೊಬ್ಬರನ್ನು ದೂಷಿಸುವದು ಅದರ ಮೂಲವಾಗಿತ್ತು ಎನ್ನುವದು ಮರಿಯಮ್ಮಳು ಮೋಶೆಯ ವಿರುದ್ಧವಾಗಿ ಮಾತಾಡಿದ ಘಟನೆಯಲ್ಲಿ ನೋಡುತ್ತೇವೆ (ಅರಣ್ಯಕಾಂಡ 12:1-15). ಬಹುಶಃ ಅವನು ಮಾಡಿದ ಪಾಪಕ್ಕಾಗಿ ಅವನಿಗೆ ಕುಷ್ಠವು ಬಂದಿದ್ದರೆ ಯೇಸು ಅವನನ್ನು ಸ್ವಸ್ಥಮಾಡದೆ ಇರಬಹುದಾಗಿತ್ತು.

**ವಚನ 3.** ಇಂಥಹ ರೋಗವನ್ನು ಹತ್ತಿಸಿಕೊಂಡವನಿಗೆ ಯೇಸು ಮಾಡಿರುವಂಥದ್ದನ್ನು ಬಹುಶಃ ಯಾರು ಮಾಡಿರದೆ ಇರಬಹುದು: ಆತನು ಅವನನ್ನು ಮುಟ್ಟಿದನು. ಧರ್ಮಶಾಸ್ತ್ರದಲ್ಲಿ ಅವನನ್ನು ಮುಟ್ಟುವದು ಅವನಿಂದ **ಮುಟ್ಟಿಸಿ**ಕೊಳ್ಳುವದು ನಿಷೇಧಿಸಲಾಗಿದೆ (ಯಾಜಕಕಾಂಡ 5:3-6). ಇಂಥಹ ಕುಷ್ಠನೊಂದಿಗೆ ಸಂಪರ್ಕ ಇಟ್ಟುಕೊಳ್ಳುವದು ಯೆಹೂದ್ಯ ಆಚರಣೆಯಲ್ಲಿ ಅಶುದ್ಧವಾಗಿದೆ. ಮಾರ್ಕ 1:41ರಲ್ಲಿ ಯೇಸುವಿನ ಮನಸ್ಸನ್ನು ಪ್ರಕಟಪಡಿಸಿದೆ, ಹೀಗೆ ಹೇಳುತ್ತದೆ. "ಆತನು ಕನಿಕರಪಟ್ಟನು" ಕೈ ನೀಡಿ ಅವನನ್ನು ಮುಟ್ಟಿದನು.

ಯೇಸು ತಿರುಗಿ ಅವನಿಗೆ, **ನನಗೆ ಮನಸ್ಸುಂಟು ಶುದ್ಧನಾಗು.** ಆ ಮನುಷ್ಯನು ಕೂಡಲೆ ವಾಸಿಯಾದನು; ರೋಗವು ನಿಧಾನ ಮಾಡದೆ ತೆಗೆದುಹಾಕಲ್ಪಟ್ಟಿತ್ತು. ಯೇಸು ಕುಷ್ಠನನ್ನು ದೈಹಿಕವಾಗಿ ಸ್ವಚ್ಛಗೊಳಿಸುವ ಬದಲು, ಆತನು ತನ್ನ ದೈವೀಕ ಶಕ್ತಿಯಿಂದ ಕುಷ್ಠನನ್ನು ಶುದ್ಧ ಮಾಡಿದನು. ಅವನಿಗೆ ದೇಹದ ಮಾಂಸಖಂಡಗಳನ್ನು ಪುನ ಸ್ಥಾಪಿಸಿ ಅವನನ್ನು ಸಮಾಜದಲ್ಲಿ ಸೇರಿಸಿದನು. ಕುಷ್ಠನನ್ನು ಶುದ್ಧಮಾಡುವದು ಮೆಸ್ಸೀಯನು ಬರುವವನಿದ್ದಾನೆ ಎಂದು ಹೇಳಿ ರುವದಕ್ಕೆ ಸೂಚನೆಯಾಗಿತ್ತು (11:2-6).

**ವಚನ 4. ಯೇಸು** ಅವನಿಗೆ ಗುಣಪಡಿಸಿದ ನಂತರ, ಅವನಿಗೆ ಎರಡು ಸಲಹೆಗಳನ್ನು ಕೊಟ್ಟನು. ಮೊದಲನೆಯದು, ಆಜ್ಞೆಯಾಗಿ ಹೇಳಿದನು **ಯಾರಿಗೂ ಹೇಳಬೇಡ** ಯೇಸು ಕೆಲವು ಸಾರಿ ಇಂಥಹ ಸಲಹೆಗಳನ್ನು ಕೊಟ್ಟನು ಇಂಥಹ ಆಶ್ಚರ್ಯಕಾರ್ಯಗಳನ್ನು ಯೆಹೂದ್ಯರಿಗೆ ಗೊತ್ತಾಗುವಾಗ ಆತನ ಬೋಧನೆ ಅವರಿಗೆ ಮುಟ್ಟುವಾಗ ಇದೆಲ್ಲವನ್ನು ರೋಮನ ಅಧಿಕಾರದ ಗಮನಕ್ಕೆ ಬರುತ್ತಾಯಿತು ಅದನ್ನು ತಪ್ಪಿಸಲು ಇಂಥಹ ಸಲಹೆ ಕೊಡುತ್ತಿದ್ದನು (9:30; 12:16; 16;20; 17:9). ಒಬ್ಬನು ಆಶರ್ಯವಾಗಬಹುದು ಸಾರ್ವಜನಿಕವಾಗಿ ಇಂಥಹ ಅದ್ಭುತ ಕಾರ್ಯಮಾಡುವಾಗ ಒಬ್ಬನು ಹೀಗೆ ಈ ಸಲಹೆಯನ್ನು ಕಾಪಾಡುತ್ತಾನೆ ಎನ್ನುವ ಆಲೋಚನೆ ಇರಬಹುದು; ಹಾಗಿದ್ದರೂ, ಇದು ತಿಳಿಸುತ್ತದೆ ಏನೆಂದರೆ ಅದ್ಭುತವು ತರುವಾಯ ಆಗಿದ್ದು, ಏಕಾಂತದಲ್ಲಿ ನಡೆದದ್ದು, ಬಹುಶಃ ಜನರ ಗುಂಪು ಅಲ್ಲಿಂದ ಚದುರಿದ ನಂತರ ಆಗಿರಬಹುದು. ಮುಂದೆ ಮತ್ತಾಯನು ಅನೇಕ ಅದ್ಭುತಗಳ ಸಂಗ್ರಹವನ್ನು ಆತನು ಹೇಳಿ ರುತ್ತಾನೆ ಅವುಗಳ ಕ್ರಮವು ಮಾರ್ಕ ಮತ್ತು ಲೂಕ ಅವರ ಕ್ರಮದಿಂದ ಭಿನ್ನವಾಗಿರುತ್ತದೆ, ಮತ್ತಾಯನು ಸರಿಯಾಗಿ ಕ್ರಮಾನುಸಾರವಾಗಿ ಅನುಸರಿಸಿರುವದಿಲ್ಲ ಎಂದು ನಾವು ನಿರೀಕ್ಷೆ ಮಾಡಬಾರದು.

ಎರಡನೆಯದಾಗಿ, ಅವನಿಗೆ ಯೇಸು **ಹೋಗಿ ಯಾಜಕನಿಗೆ ನಿನ್ನ ಮೈ ತೋರಿಸಿ ಮೋಶೆ ನೇಮಿಸಿದ ಕಾಣಿಕೆಯನ್ನು ಕೊಡು; ಅದು ಜನರಿಗೆ ಸಾಕ್ಷಿಯಾಗಲಿ ಎಂದು ಹೇಳಿದನು.**

ಯಾಜಕನು ಯಾರು ಚರ್ಮರೋಗಕ್ಕೆ ತುತ್ತಾಗಿರುತ್ತಾರೋ ಅವರನ್ನು ಪರಿಶೀಲಿಸುವ ಜವಾಬ್ದಾರಿ ಅವರಿಗಿತ್ತು. ಈ ಮನುಷ್ಯನು ಶುದ್ಧನು ಎಂದು ಯಾಜಕರು ಪ್ರಕಟಿಸಬೇಕಾಗಿತ್ತು. ಅವರ ಪ್ರಕಾರ, "ಯಾಜಕನು ಸಾರ್ವಜನಿಕ ಆರೋಗ್ಯದ ಸೇವೆಗಾಗಿ ನೇಮಿಸಿದ ಉಪದೇಶಕರ ಗುಂಪಿನ ಸದಸ್ಯನಾಗಿದ್ದು ಈ ಸೇವೆ ಮಾಡುತ್ತಿದ್ದರು."[2] ಧರ್ಮಶಾಸ್ತ್ರವು ವಿಶೇಷವಾಗಿ ಕುಷ್ಠನು ಹೇಗೆ ಗುಣಹೊಂದಿದನು ಮತ್ತು ಎಂಥಹ ಕಾಣಿಕೆ ಕೊಡಬೇಕು ಎನ್ನುವದು ಪ್ರಮಾಣಿಕರಿಸುತ್ತದೆ (ಯಾಜಕಕಾಂಡ 14:1-32). ಶುದ್ಧನಾದ ಕುಷ್ಟನು ಯೆರೂಸಲೇಮಿಗೆ ಪ್ರಯಾಣಿಸಿ ನೇಮಕವಾದ ತ್ಯಾಗಪೂರ್ಣ ಕಾಣಿಕೆಗಳನ್ನು ಕೊಡಬೇಕಾಗಿತ್ತು.

ಈ ಭಾಗದ ಅರ್ಥವು, "ಅವರಿಗೆ ಪ್ರಮಾಣಿಕರಿಸಬೇಕಾಗಿತ್ತು." ಇದರ ಲಕ್ಷಣ ನೋಡುವಾಗ ದಿಗ್‌ಭ್ರಮೆಯಾಗುತ್ತದೆ. ಈ ಭಾಗದ ಸಂದಿಗ್ಧಾರ್ಥವು ಎರಡು ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಮೊದಲನೆಯದು, ಅವರು "ಯಾರಿಗೆ" ಪ್ರಕಟಿಸಲು ತೋರಿಸಬೇಕು? ಇದು "ಯಾಜಕರಿಗೆ" ಎಂದು ಹೇಳಬಹುದು, ಆದರೆ ಈ ವಚನದಲ್ಲಿ "ಯಾಜಕ"ನೆಂದು ಏಕವಚನವಿರುವದರಿಂದ ಇದು ಪ್ರಶ್ನಾತೀತವಾಗಿ ಉಳಿದಿದೆ. "ಅವರು" ಎಂದರೆ ಬಹುಶಃ "ಜನರ ಗುಂಪು" ಎಂದು ಸೂಚಿಸಿರಬಹುದು ಅಥವಾ ಇನ್ನು ಸಾಮಾನ್ಯವಾಗಿ "ಜನರು" ಎಂದು ಗುರಿತಿಸಲಾಗಿದೆ (8:1). ಎರಡನೆಯದಾಗಿ, "ಪ್ರಮಾಣಿಕರಿಸುವದು" ಎಂದರೆ ಈ ಶಬ್ದ ಏನನ್ನು ಹೇಳುತ್ತದೆ? (1) ಬಹುಶಃ ಗುಣಹೊಂದಿದ ಈ ಕುಷ್ಟನು ಯೇಸುವಿನ ಕುರಿತು ಸಾಕ್ಷಿ ಹೇಳಬೇಕಾಗಿತ್ತು. (2) ಅವರು ಯೇಸುವನ್ನು ನಂಬದೆ ಇರುವದರಿಂದ ಆ ಗುಣ ಹೊಂದಿದ ವ್ಯಕ್ತಿ ಅವರ ವಿರುದ್ಧವಾಗಿ ಸಾಕ್ಷಿ ಹೇಳಬೇಕಾಗಿರುವ ಸಾಧ್ಯತೆವಿರುವದು. (3) ಯೇಸು ಆ ಮನುಷ್ಯನಿಗೆ ನೇಮಿಸಿದ ಸಮರ್ಪಣೆ ಕಾಣಿಕೆ ಕೊಡಲು ಕಳಿಸುತ್ತಿದ್ದಾನೆ ಅವನು ಧರ್ಮಶಾಸ್ತ್ರಕ್ಕೆ ವಿಧೇಯನಾಗಬೇಕೆನ್ನುವದಕ್ಕಾಗಿ (ನೋಡಿರಿ 5:17-20). ಒಂದು ಸಮಸ್ಯೆ ಇಲ್ಲದೆ, ಹಾಗಿದ್ದರೂ, ಈ ಮೂರು ಸಲಹೆಯೊಂದಿಗೆ ಕೂಡ ಈ ಕುಷ್ಠದಿಂದ ಶುದ್ಧನಾದವನಿಗೆ ಯೇಸು ಗುಣಪಡಿಸಿ ಅವನಿಗೆ ಹೇಳಿದ್ದಾನೆ "ನೀನು ಯಾರಿಗೂ ಹೇಳಬೇಡ" ಎಂಬುದಾಗಿ. (4) ನಾಲ್ಕನೆಯ ಒಂದು ಆಯ್ಕೆ ಇಲ್ಲದೆ ಯಾಜಕನಿಂದ ಪರೀಕ್ಷೆ ಮತ್ತು ನೇಮಿಸಿದ ತ್ಯಾಗಪೂರ್ವಕ ಕಾಣಿಕೆ ಇದು "ಜನರ ಗುಂಪಿಗೆ" ಅಥಾವ "ಜನರಿಗೆ" ಪ್ರಮಾಣಿಕರಿಸಿ ಸ್ಪಷ್ಟವಾಗಿ ಕುಷ್ಠನು ಶುದ್ಧನಾಗಿದ್ದಾನೆ ಎಂದು ಪ್ರಕಟಿಸಿದಾಗ, ಇಂಥಗ ಕಾರ್ಯದಿಂದ, ಅವನು ತಿರುಗಿ ಸಮಾಜದಲ್ಲಿ ಪ್ರವೇಶಿಸಲು ಸ್ವತಂತ್ರನಾಗಿರುತ್ತಾನೆ. ಈ ವಿವರಣೆಯು ಹೆಚ್ಚಿನದಾಗಿ ಪಾಂಡಿತ್ಯ ಪ್ರಜ್ಞೆ ಉಂಟುಮಾಡುತ್ತದೆ ಮತ್ತು ವಿಶಾಲವಾಗಿ ಆಧುನಿಕ ಅನೇಕ ಅನುವಾದಗಳು ಈ ವಿಷಯಕ್ಕೆ ಪುಷ್ಠಿನೀಡುತ್ತದೆ (NEB; TEV; LB; NCV; CEV; JNT; NLT).

ಇದಕ್ಕೆ ಹೋಲುವ ಒಂದು ಘಟನೆ ನಮಗೆ ತಿಳಿಸುವದೇನೆಂದರೆ ಈ ಗುಣಹೊಂದಿದ ಕುಷ್ಠನ ಕರ್ತನಿಗೆ ಅವಿಧೆಯನಾದನು ಮತ್ತು ಅವನ ಆತುರತೆಯಿಂದ ತನ್ನ ಸುತ್ತಲ್ಲಿರುವ ಎಲ್ಲರಿಗೆ ಈ ವಿಷಯ ಹಂಚಿಕೊಂಡನು (ಮಾರ್ಕ 1:45; ಲೂಕ 5:15). ಅಂತಿಮವಾಗಿ ಇದು ಯೇಸುವಿನ ಸೇವೆ ಗುಟ್ಟಾಗಿ ನಡೆಯುವಂತೆ ಆಯ್ತು, ಆತನು ತುಂಬಾ ಜನವಸತಿ ಇರುವ ಸ್ಥಳಗಳಲ್ಲಿ ಹೊಗದೆ ತಾತ್ಕಾಲಿಕವಾಗಿ ಅಲ್ಲಿಗೆ ಹೋಗದಂತೆ ಒತ್ತಾಯ ಮಾಡಲಾಗಿತ್ತು.

## ಶತಾಧಿಪತಿಯ ಆಳನ್ನು ಸ್ವಸ್ಥಮಾಡಿದ್ದು (8:5-13)

**[5]ಆತನು ಕಪೆರ್ನೌಮಿಗೆ ಬಂದಾಗ ದಂಡಿನ ಶತಾಧಿಪತಿಯು ಆತನ ಬಳಿಗೆ ಬಂದು - [6]ಪ್ರಭುವೇ, ನನ್ನ ಆಳು ಪಾರ್ಶ್ವವಾಯುನಿಂದ ಬಹಳ ಕಷ್ಟಪಡುತ್ತಾ ಮನೆಯಲ್ಲಿ ಬಿದ್ದಿದ್ದಾನೆ ಎಂದು ಹೇಳಿಕೊಂಡನು. ಆತನು [7]ನಾನು ಬಂದು ಅವನನ್ನು ವಾಸಿಮಾಡುತ್ತೇನೆ ಎಂದು ಹೇಳಿದ್ದಕ್ಕೆ [8]ಆ ಶತಾಧಿಪತಿಯು - ಪ್ರಭುವೇ, ನೀನು ನನ್ನ ಮನೆಗೆ ಬರತಕಷ್ಟು ಯೋಗ್ಯತೆ**

**ನನ್ನಲ್ಲಿಲ್ಲ; ನೀನು ಒಂದು ಮಾತು ಹೇಳಿದರೆ ಸಾಕು, [9]ನನ್ನ ಆಳಿಗೆ ಗುಣವಾಗುವದು. ನಾನು ಸಹ ಮತ್ತೊಬ್ಬರ ಕೈ ಕೆಳಗಿರುವವನು; ನನ್ನ ಕೈಕೆಳಗೆ ಸಿಪಾಯಿಗಳಿದ್ದಾರೆ; ನಾನು ಅವರಲ್ಲಿ ಒಬ್ಬನಿಗೆ ಹೋಗು ಎಂದು ಹೇಳಿದರೆ ಹೋಗುತ್ತಾನೆ; ಮತ್ತೊಬ್ಬನು ಬಾ ಎಂದು ಹೇಳಿದರೆ ಬರುತ್ತಾನೆ; ನನ್ನ ಆಳಿಗೆ ಇಂಥಿಂಥನ್ನು ಮಾಡು ಎಂದು ಹೇಳಿದರೆ ಮಾಡುತ್ತಾನೆ ಅಂದನು. [10]ಯೇಸು ಇದನ್ನು ಕೇಳಿ ಆಶ್ಚರ್ಯಪಟ್ಟು, ತನ್ನ ಹಿಂದೆ ಬರುತ್ತಿದ್ದವರಿಗೆ - ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿಯೂ ಕಾಣಲಿಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. [11]ಇದಲ್ಲದೆ ನಿಮಗೆ ಹೇಳುವದೇನೆಂದರೆ ಮೂಡಣ ಪಡುವಣ ದಿಕ್ಕುಗಳಿಂದ ಬಹಳ ಜನ ಬಂದು ಪರಲೋಕ ರಾಜ್ಯದಲ್ಲಿ ಅಬ್ರಹಾಮ ಇಸಾಕ್ ಯಾಕೋಬ ಎಂಬವರ ಸಂಗಡ ಊಟಕ್ಕೆ ಕೂರುವರು; [12]ಆದರೆ ಆ ರಾಜ್ಯದ ಬಾಧ್ಯಸ್ಥರು ಹೊರಗೆ ಕಗ್ಗತ್ತಲೆಗೆ ಹಾಕಲ್ಪಡುವರು; ಅಲ್ಲಿ ಗೋಳಾಟವು ಕಟಕಟನೆ ಹಲ್ಲು ಕಡಿಯೋಣವು ಇರುವವು ಎಂದು ಹೇಳಿದನು. [13]ಬಳಿಕ ಯೇಸು ಆ ಶತಾಧಿಪತಿಗೆ - ನೀನು ನಂಬಿದಂತೆ ನಿನಗಾಗಲಿ ಹೋಗು ಎಂದು ಹೇಳಿದನು. ಅದೇ ಗಳಿಗೆಯಲ್ಲಿ ಅವನ ಆಳಿಗೆ ಗುಣವಾಯಿತು.**

**ವಚನ 5.** ಮುಂದಿನ ಅದ್ಭುತವು **ಕಪೆರ್ನೌಮಿನಲ್ಲಿ** ಸಂಭವಿಸಿತು, ಗಲಿಲಾಯ ಸಮುದ್ರ ದಂಡೆಯಲ್ಲಿರುವ ಈ ಪಟ್ಟಣ ಅತಿವೇಗವಾಗಿ ಬೆಳೆದಿರುವಂಥದ್ದಾಗಿತ್ತು. ಈ ಪಟ್ಟಣವು ಪೇತ್ರನ ಸ್ವಂತ ಊರಾಗಿತ್ತು (8:14) ಮತ್ತು ಯೇಸುವಿನ ಕಾರ್ಯಗಳಿಗೆ ಮೂಲ ಸ್ಥಾನವಾಯಿತು (4:13; 9:1). 11:23ರಲ್ಲಿ, ಯೇಸು ಈ ಪಟ್ಟಣದ ಮೇಲೆ ಶಾಪವನ್ನು ಪ್ರಕಟಿಸುತ್ತಾನೆ ಯಾಕೆಂದರೆ ಆತನು ಅಲ್ಲಿ ಮಾಡಿದ ಮಹತ್ಕಾರ್ಯಗಳನ್ನು ನಂಬಲು ಆ ಜನರು ನಿರಾಕರಿಸಿದರು. ಇಂದು ಭೂಶೋಧನೆ ಮಾಡಿ ಅವನತಿ ಹೊಂದಿರುವ ಯೆಹೂದ್ಯ ಸಭಾ ಮಂದಿರ ಮತ್ತು ಕೆಲವು ಮನೆಗಳು, ಇನ್ನೊಂದು ಸಂಪ್ರದಾಯಿಕವಾಗಿ ಹೇಳುವಂಥದ್ದ ಪೇತ್ರನ ಮನೆ ಕಂಡುಕೊಳ್ಳಲಾಗಿದೆ.[3]

**ಯೇಸು**ವಿಗೆ ಕೇಳಿಕೊಂಡಿರುವ ಈ ವ್ಯಕ್ತಿ ಅನ್ಯನಾಗಿದ್ದಾನೆ, ರೋಮಾ **ಶತಾಧಿಪತಿ.** ಶತಾಧಿಪಗಳು ಅವರ ಉದ್ಯೋಗ ಸೈನಿಕರಂತೆ ಕೆಲಸ, ಇತರೆ ಆಜ್ಞೆ ಮಾಡುವ ಅಧಿಕಾರಿಯನ್ನು ಇಷ್ಟಪಡುವವರಲ್ಲ, ಅವರಲ್ಲಿಯ ಕಾದಾಟ ಇಷ್ಟಪಡುವವರಲ್ಲ. ಅವರು "ರೋಮಾ ಸೈನ್ಯಕ್ಕೆ ಬೆನ್ನೆಲುಬು" ಎಂದು ಕರೆಸಿಕೊಳ್ಳುತ್ತಿದ್ದರು. ರೋಮಾ ಸೈನ್ಯವು ಇಪ್ಪತ್ತೈದು ಸೈನ್ಯದಳಗಳನ್ನು ಹೊಂದಿತ್ತು (ಅಂದಾಜು 150,000 ಪುರುಷರು) ಸಾಮ್ರಾಜ್ಯದ ಉದ್ದಕ್ಕೂ ಅವರು ಇರುತ್ತಿದ್ದರು.[4] ಒಂದು ರೋಮಾ "ಸೈನ್ಯದಂಡು" ಅದು ಪೂರ್ಣ ಬಲದಿಂದಿರುವ ಆರು ಸಾವಿರ ಸೈನಿಕರನ್ನು ಹೊಂದಿರುತ್ತಿತ್ತು, ಅವುಗಳನ್ನು ಆರುನೂರ ಸೈನಿಕರಂತೆ ಹತ್ತು ಸೈನ್ಯಪಡೆಗಳನ್ನಾಗಿ ವಿಭಾಗಿಸುತ್ತಿದ್ದರು. ಒಂದು "ಸೈನ್ಯ ಪಡೆಯನ್ನು" ಮುಂದೆ ಆರು "ಶತಾಧಿಪತಿ"ಗಳಾಗಿ ವಿಭಾಗಿಸುವರು, ಇದರಲ್ಲಿ ಒಂದು ನೂರ ಜನ ಪುರುಷ ಸೈನಿಕರು ಇವರಿಗೆ ಶತಾಧಿಪತಿಯ ನಾಯಕನಾಗಿರುತ್ತಾನೆ. ಈ ನಾಯಕ ಶಿಸ್ತಿಗೆ ಜವಾಬ್ದಾರನು, ನೆಮಕಾತಿಗೆ ಮತ್ತು ಹೇಳಿದ್ದನ್ನು ಮಾಡುವದರ ಕುರಿತಾಗಿ ಈತನೇ ಮೇಲ್ವಿಚಾರಣೆ ಮಾಡುವ ಜವಾಬ್ದಾರಿಹೊಂದಿರುತ್ತಾನೆ.

ಇಲ್ಲಿ ವಿಶೇಷವಾದ ಶತಾಧಿಪತಿಯ ಕಾಣಿಸಿಕೊಳ್ಳುವಿಕೆ ಕಪೆರ್ನೌಮಿನ ಘಟನೆಯಲ್ಲಿ ಜೋಡಿಸಲಾಗಿದೆ. David Hill ವಿವರಿಸಿದ್ದಾರೆ,

> ಅಂತಿಪದ ಹೆರೋದನು ಪೆರಿಯಾ ಮತ್ತು ಗಲಿಲಾಯಕ್ಕೆ ಉಪರಾಜನಾಗಿದ್ದನು, ಸುಂಕವಸೂಲಿಗಾಗಿ ಅಧಿಕಾರ ಹೊಂದಿದ್ದನು, ಅವನು ತನ್ನ ಪ್ರಾಂತಕ್ಕೆ ಅವನು ಹೊರಗಿನಿಂದ ಜನರನ್ನು ನೇಮಿಸುತ್ತಿದ್ದನು. ಕಪೆರ್ನೌಮ ರಕ್ಷಣಾ ಸೈನ್ಯ ಹೊಂದಿರುವ ಪಟ್ಟಣವಾಗಿತ್ತು ಮತ್ತು ಪ್ರಮುಖವಾದ ಪದ್ಧತಿ ಆಚರಣೆ, ಮತ್ತು ಸೈನಿಕರ ಅಧಿಕಾರಿಗಳನ್ನು ಹೊಂದಿರುವ ಪಟ್ಟಣವಾಗಿತ್ತು (ಹೋಲಿಸಿ ಯೋಹಾನ 4:46) ಅಂಥವರು ಅಲ್ಲಿರುವದು ಸರ್ವೆಸಾಮಾನ್ಯವಾಗಿತ್ತು.[5]

ರೋಮನ್ ಶತಾಧಿಪತಿಗಳು ಎಲ್ಲಿ ಹೆಚ್ಚಿನ ಗೌರವ - ನೀತಿಯು ಇರುವಂತ ಪುರುಷರು ಇರುತ್ತಾರೆ ಸಾಮಾನ್ಯವಾಗಿ ಅಲ್ಲಿಯೇ ಇರಲು ಅವರು ನಿರೀಕ್ಷಿಸುತ್ತಿದ್ದರು. ಹೊಸ ಒಡಂಬಡಿಕೆಯಲ್ಲಿ ತಿಳಿಸಿರುವ ಪ್ರತಿಯೊಬ್ಬ ಶತಾಧಿಪತಿಯು ಈ ಗುಣವನ್ನು ಹೊಂದಿರುತ್ತಾನೆ (27:54; ಅಪೊಸ್ತಲರ ಕೃತ್ಯಗಳು 10:1, 2, 22; 22:25, 26; 27:43). ಲೂಕ 7:3-5ರಲ್ಲಿ, ಅಲ್ಲಿ ಕಂಡು ಬರುವ ವ್ಯಕ್ತಿ ಅನ್ಯನಾಗಿದ್ದು ದೇವರಿಗೆ ಭಯಪಡುವವನಂತೆ ಕೊರ್ನಲ್ಯನು ಹೇಳಿದಂತೆಯೆ ಅವನು ಕಂಡು ಬರುತ್ತಾನೆ (ಅಪೊಸ್ತಲರ ಕೃತ್ಯಗಳು 10:2, 22). ಈ ಪ್ರತ್ಯೇಕವಾದ ಈ ಶತಾಧಿಪತಿಯ ಗುಣಗಳನ್ನು ನೋಡುವಾಗ ಇವನು ರೋಮನ್ ಸೈನಿಕರಂತೆ ಇಲ್ಲ, ಆತನು ಯೆಹೂದ್ಯರಿಂದ ಹೆಚ್ಚಿನ ಗೌರವ ಹೊಂದಿದವನಾಗಿದ್ದನು.

ಲೂಕನು ದಾಖಲಿಸಿದ್ದಾನೆ ಅದೇನೆಂದರೆ ಈ ಶತಾಧಿಪತಿಯು ಕ್ರಿಸ್ತನಿಗೆ ಕೆಲವು ಯೆಹೂದ್ಯ ಹಿರಿಯರಿಂದ ಕೇಳಿಕೊಂಡನು ಎಂಬುದಾಗಿದೆ. ಅವರು ಯೇಸುವಿಗೆ "ನಿನ್ನಿಂದ ಇಂಥ ಉಪಕಾರ ಹೊಂದುವಕ್ಕೆ ಅವನು ಯೋಗ್ಯನು; ಅವನು ನಮ್ಮ ಜನರನ್ನು ಪ್ರೀತಿಸುವವನು, ತಾನೇ ನಮ್ಮ ಸಭಾಮಂದಿರವನ್ನು ನಮಗಾಗಿ ಕಟ್ಟಿಸಿದನು ಎಂದು ಬೇಡಿಕೊಂಡರು" (ಲೂಕ 7:4, 5). ಮತ್ತಾಯ ಮತ್ತು ಲೂಕನ ವ್ಯತ್ಯಾಸಕ್ಕೆ ಸಂಬಂದಿಸಿದಂತೆಯೆ ವ್ಯಾಖ್ಯಾನಿಸಿದ್ದಾರೆ, "ಮನುಷ್ಯನು ಮಧ್ಯಸ್ಥಗಾರರಿಂದ ಮಾಡುವದು ಅದನ್ನೆ ಅದನ್ನೆ ಅವನು ಸ್ವಂತವಾಗಿ ಹೇಳ ಬಹುದು. ಅದರಿಂದ ಮತ್ತಾಯನು ಶತಾಧಿಪತಿಯು ಯೇಸುವಿನೊಂದಿಗೆ ಮಾತಾಡಿರುವದು ಸರಳವಾಗಿ ಕೊಟ್ಟಿದ್ದಾನೆ, ಆ ಕಾರಣದಿಂದ ಲೂಕನು ಹೆಚ್ಚಿನ ವಿವರಣೆ ನಿಜವಾದ ಘಟನೆಯ ಕ್ರಮಾನುಗತಿಯನ್ನು ಕೊಟ್ಟಿದ್ದಾನೆ."[6]

**ವಚನ 6.** ಶತಾಧಿಪತಿಯು ಯೇಸುವಿಗೆ **ಪ್ರಭುವೇ** *(kurios)* ಎಂದು ವಚನ 6 ಮತ್ತು 8ರಲ್ಲಿ ಹೇಳುತ್ತಿದ್ದಾನೆ. ಈ ಪದವು ಆಳವಾದ ಭಿನ್ನವಾದ ಅರ್ಥಹೊಂದಿದೆ, ಸಭ್ಯವುಳ್ಳಂಥಹ ("ಸರ್") ಎನ್ನುವ ದೈವೀಕ ಶಿರೋನಾಮೆ ("ದೇವರು") ಎಂದು ಹೇಳಲಾಗಿದೆ. ಇದು ಇಲ್ಲಿ ಉಪಯೋಗಿಸಿರುವದು ಗೌರವಕ್ಕಿಂತಲೂ ಹೆಚ್ಚಿನ ಅರ್ಥವುಳ್ಳದ್ದಾಗಿದೆ; ಅದು ಆತನು ಕರ್ತನೆಂಬುದಕ್ಕೆ ಆತನ ಪ್ರಭುತ್ವವನ್ನು ನೆನಪಿಗೆ ತರುವಂಥದ್ದಾಗಿರಬಹುದು. ವಚನ 8 ಮತ್ತು 9ರಲ್ಲಿ ಶತಾಧಿಪತಿಯು ಯೇಸುವಿಗೆ ಈ ರೀತಿಯಾಗಿ ಹೇಳಿರುವದರಿಂದ ಇದು ಗುರುತಿಸಲ್ಪಡಬಹುದು.

ಶತಾಧಿಪತಿಯ ನಡವಳಿಕೆ ಗುಣಲಕ್ಷಣ ಮುಂದೆ ಅವನು **ಆಳು** ವಿಷಯಕ್ಕೆ ಸಂಬಂಧಪಟ್ಟಿರುವದರಲ್ಲಿ ತೋರಿಸುತ್ತದೆ. ಮುಕ್ತಾಯನ ಪ್ರಕಾರ ಒಂದು ಗ್ರೀಕ್ ಪದ ಉಪಯೋಗಿಸಿದ್ದಾನೆ (*pais*) ಇದರ ಅರ್ಥ "ಮಗು" ಇದು ಮಗನು ಅಥವಾ ಗುಲಾಮನನ್ನು ಸೂಚಿಸುತ್ತದೆ. ಹಾಗಿದ್ದರೂ, ಲೂಕ 7:2ರಲ್ಲಿ "ಗುಲಾಮ" ಎನ್ನುವದಕ್ಕೆ ಗ್ರೀಕ್ ಶಬ್ದ (*doulos*).[7] ಎಂದು ಉಪಯೋಗಿಸಲಾಗಿದೆ. ನಿಜಾಂಶವೇನೆಂದರೆ ಈ ಮನುಷ್ಯನು ಗುಲಾಮರನ್ನು ಹೆಚ್ಚಾಗಿ ಕಾಳಜಿ ಮಾಡಿದ್ದಾನೆ, ಆತನ ಅನೇಕ ರೋಮನ್ನರನ್ನು ಕೇವಲ ಒಂದು ಆಸ್ತಿಯಂತೆ ಅವರನ್ನು ನೋಡಿದ್ದಾನೆ, ಇದು ಆತನ ಒಳ್ಳೆಯ ಮನಸ್ಸು ಹೊಂದಿದನೆಂದು ದೃಢಿಕರಿಸುತ್ತದೆ.

**ಶತಾಧಿಪತಿಯ ಆಳು ಪಾರ್ಶ್ವವಾಯುನಿಂದ ಬಹಳ ಕಷ್ಟಪಡುತ್ತಾ ಮನೆಯಲ್ಲಿ ಬಿದ್ದಿದ್ದಾನೆ.** ಕಾರಣ ಮತ್ತು ಪಾರ್ಶ್ವವಾಯು ಹೇಗಾಯಿತು ಎಂಬುದು ಕೊಟ್ಟಿರುವುದಿಲ್ಲ. ಗ್ರೀಕ್ ಕ್ರಿಯಾಪದ (*basanizō*), ಎನ್ನುವದನ್ನು ಅನುವಾದಿಸಿದಾಗ "ಸಂಕಟಪಡು" ಎಂದಾಗುತ್ತದೆ, ಸಾಂಕೇತಿಕವಾಗಿ ತೋರಿಸಲು ಉಪಯೋಗಿಸಿದೆ, ಅದು ದೊಡ್ಡ ಮಾನಸಿಕ ಯಾತನೆ ತಿಳಿಸುತ್ತದೆ. NLT ಅನುವಾದದಲ್ಲಿ ಈ ಭಾಗವನ್ನು "ಚಿತ್ರಹಿಂಸೆಯೊಂದಿಗೆ ನೋವು" ಎಂದು ಬರೆಯಲಾಗಿದೆ. ಯಜಮಾನನು ಯೇಸುವಿಗೆ ಕೇಳಿಕೊಂಡದ್ದು, "ಬಂದು ಆತನ ಆಳಿನ ಜೀವನ ಕಾಪಾಡು" ಎನ್ನುವಂಥದ್ದಾಗಿತ್ತು (ಲೂಕ 7:3).

**ವಚನ 7. ಯೇಸು ಅವನಿಗೆ, "ನಾನು ಬಂದು ಅವನನ್ನು ವಾಸಿ ಮಾಡುತ್ತೇನೆ ಎಂದು ಹೇಳಿದನು."** ಗ್ರೀಕ್ ಮೂಲ ಪಠ್ಯದಲ್ಲಿ, ವೈಯಕ್ತಿಕವಾಗಿ ಪ್ರಕಟಿಸಿಕೊಂಡದ್ದು "ನಾನು"

(*egō*) ಎಂಬುದು ಒತ್ತಿ ಹೇಳಿದೆ. ಈ ವೈಶಿಷ್ಯವು NJB ನಲ್ಲಿ ಕಾಣುತ್ತೇವೆ: "*ನಾನು ಸ್ವತಃ* ಬರುತ್ತೇನೆ ಮತ್ತು ಗುಣಪಡಿಸುತ್ತೇನೆ" (ಒತ್ತಿ ಹೇಳಿದ್ದು ನನ್ನದು). ಕೆಲವು ಪಂಡಿತರು ಯೇಸುವಿನ ಈ ಹೇಳಿಕೆಯನ್ನು ಪ್ರಶ್ನೆಯೆಂಬಂತೆ ವಿವರಿಸುತ್ತಾರೆ. "ನಾನು ಹೋಗಿ ಅವನನ್ನು ಗುಣಪಡಿಸಲೋ?" ಇನ್ನು ಬೇರೆ ಪದದಲ್ಲಿ ಹೇಳುವದಾದರೆ, "ನಾನೋಬ್ಬ [ಯೆಹೂದ್ಯನು ಅನ್ಯರ ಮನೆಯಲ್ಲಿ] ಹೊಗಬೇಕೋ?" Douglas R. A. Hare ಅವರು ಯೇಸು ಕಾನಾನ್ಯ ಸ್ತ್ರೀಯೊಬ್ಬಳ ಮಗಳನ್ನು ಸ್ವಸ್ತಮಾಡಲು ಯೇಸು ಉತ್ತೇಜನ ಕೊಡುತ್ತಾರೆ. ಇದು 15:21-28ರಲ್ಲಿದೆ.[8] Mounce ಅವರು ಈ ಅಂಶಕ್ಕೆ ಅವರು ವಿರೋಧವಾಗಿ ಹೇಳಿದ್ದಾರೆ: "ಯೇಸು ಅಲ್ಲಿಗೆ ಹೋಗಿದ್ದರು ಮತ್ತು ಕುಷ್ಟ ರೋಗಿಯನ್ನು ಮುಟ್ಟಿದನು: ಅನ್ಯನ ಮನೆಯಲ್ಲಿ ಹೊಗಲು ಆತನು ಸಂಶಯಪಡಲಿಲ್ಲ."[9]

**ವಚನ 8.** ಲೂಕನ ಪ್ರಕಾರ ಯೇಸು ಶತಾಧಿಪತಿಯ ಮನೆಯ ಹತ್ತಿರ ಹೋಗುತ್ತಿರುವಾಗ ಶತಾಧಿಪತಿಯ ಸ್ನೇಹಿತರು ಯೇಸುವಿಗೆ ಬೇಟಿಯಾದರು, ಶತಾಧಿಪತಿಯು ಹೇಳಿದ ವಿಷಯ ಇವರು ಯೇಸುವಿಗೆ ಹೇಳಿದರು (ಲೂಕ 7:6, 7). **ಶತಾಧಿಪತಿಯು ಹೇಳಿದ್ದಾನೆ, ಪ್ರಭುವೆ ನೀನು ನನ್ನ ಮನೆಗೆ ಬರತಕ್ಕಷ್ಟು ಯೋಗ್ಯತೆ ನನ್ನಲ್ಲಿಲ್ಲ.** ಈ ಪ್ರತಿಕ್ರಿಯೆ ಶತಾಧಿಪತಿಯ ಮಾನವಿಯತೆ ತೋರಿಸುತ್ತದೆ, ಆತನ ಮನೆಯಲ್ಲಿ ಯೇಸುವನ್ನು ಅಥಿತಿಯಾಗಿ ಸ್ವೀಕರಿಸಲು ಯೋಗ್ಯನಾಗಿಲ್ಲ ಎಂದು ತನ್ನಷ್ಟಕ್ಕೆ ತಾನೇ ನಂಬಿದನು. ಈ ಮನುಷ್ಯನು ದೇವರಿಗೆ ಭಯಪಡುವವನಾಗಿದ್ದನು ಮತ್ತು ಸ್ಥಳೀಯ ಯೆಹೂದ್ಯ ಮಂದಿರ ಕಟ್ಟಲು ಹಣ ಸಹಾಯ ಮಾಡಿರಬಹುದು, ಆತನು ಅನ್ಯರ ಮನೆಯನ್ನು ಪ್ರವೇಶಿಸಬಾರದು ಎನ್ನುವ ಯೆಹೂದ್ಯರ ನಿಷೇದದ ಕುರಿತ ಆತನು ಎಚ್ಚರವಹಿಸಿದನು ಎನ್ನುವದರಲ್ಲಿ ಸಂಶಯವಿಲ್ಲ (ನೋಡಿರಿ ಯೋಹಾನ 18:28; ಅಪೊಸ್ತಲರ ಕೃತ್ಯಗಳು 10:28). ಇದು ಸತ್ಯವೇದದ ನಿಯಮಕ್ಕಿಂತ ಇದು ಸಂಪ್ರದಾಯದ ನಿಯಮವಾಗಿತ್ತು. Mishnah ಪ್ರಕಾರ ನಿಷೇದವನ್ನು ಹೀಗೆ ಹೇಳಿದ್ದಾನೆ. "ಅನ್ಯರು ವಾಸಮಾಡುವ ಸ್ಥಳವು ಅಶುದ್ಧವಾಗಿದೆ."[10] ಎಂದು ಸ್ಪಷ್ಟನೆ ನೀಡುವದರ ಮುಖಾಂತರ ಅದನ್ನು ಕಾಪಾಡಿದ್ದಾರೆ. ಶತಾಧಿಪತಿಯು ಯೇಸುವನ್ನು ತನ್ನ ಮನೆಯಲ್ಲಿ ಆಹ್ವಾನಿಸಿದ್ದಿಯಾದರೆ ಅವನು ಯೇಸುವಿಗೆ ಯೆಹೂದ್ಯರ ಮಾತನ್ನು ಮೀರುವದೋ ಅಥವಾ ಅಸ್ವಸ್ಥತೆಯಲ್ಲಿ ಬಿದ್ದಿರುವವನ್ನು ಅಲಕ್ಷ್ಯಮಾಡುವದೋ ಎಂದು ಕೇಳಬಹುದಾಗಿತ್ತು.

ಶತಾಧಿಪತಿಯು ಯೇಸುವನ್ನು ಆಹ್ವಾನಿಸುವ ಬದಲು, ಸರಳವಾಗಿ ತನ್ನ ಆಳನ್ನು ಸ್ವಸ್ಥಮಾಡಲು ಯೇಸುವನ್ನು ಕೇಳುತ್ತಾನೆ: **ನೀನು ಒಂದು ಮಾತು ಹೇಳಿದರೆ ಸಾಕು, ನನ್ನ ಆಳಿಗೆ ಗುಣವಾಗುವದು.** ಅವನು ಯೇಸು ತನ್ನ ಮನೆಯಲ್ಲಿ ಪ್ರವೇಶಿಸಲು ಯೋಗ್ಯನಲ್ಲವೆಂದು ನಂಬಿದ್ದರೂ ಸಹ ಅವನು ಯೇಸುವು ತನ್ನ ಆಳನ್ನು ಮುಟ್ಟದೆ ದೂರದಿಂದಲೇ ಗುಣಪಡಿಸಬಲ್ಲನು ಎನ್ನುವ ಸಾಕಷ್ಟು ವಿಶ್ವಾಸ ಅವನಿಗಿತ್ತು.

**ವಚನ 9.** ಇಲ್ಲಿ ಮುಂದೆ ಶತಾಧಿಪತಿಯ ವಿಶ್ವಾಸವನ್ನು ಪರಿಕ್ಷಿಸುವಂಥದ್ದಾಗಿದೆ ಯೇಸು ಗುಣಪಡಿಸುವ ಸಾಮರ್ಥ್ಯದ ಕುರಿತದ್ದಾಗಿದೆ. ಅವನು **ಅಧಿಕಾರದ** ಕುರಿತು ಅರ್ಥ ಮಾಡಿಕೊಂಡಿದ್ದನು. ಅವನು ಅಧಿಕಾರದ **ಕೈ ಕೆಳಗಿರುವವನು** ಮತ್ತು ಅಧಿಕಾರದಲ್ಲಿಯೂ ಇದ್ದನು. ಒಂದು ಕಡೆ ಅವನು ತನ್ನ ಸೈನ್ಯದ ಪಡೆಗೆ ಮತ್ತು ಸೈನ್ಯದ ಮಹಾ ಗುಂಪಿಗೆ - ಮತ್ತು ಕೊನೆಗೆ ಚಕ್ರವರ್ತಿಗೆ ಉತ್ತರಕೊಡಬೇಕಾಗಿತ್ತು. ಇನ್ನೊಂದು ರೀತಿಯಲ್ಲಿ ತನ್ನ ಸೈನಿಕರಿಗೆ ಏನಾದ್ರು ಮಾಡಲು ಹೇಳಿದರೆ ಅವರು ಅದನ್ನು ಪ್ರಶ್ನೆ ಮಾಡದೆ ಅಂಗಿಕರಿಸುತ್ತಿದ್ದರು. ಅವರು ಅವಿಧೇಯರಾದರೆ ಅದನ್ನು ಚಕ್ರವರ್ತಿಗೆ ಮತ್ತು ಸಾಮ್ರಾಜ್ಯಕ್ಕೆ ಅವಮಾನ ಮಾಡಿದರೆಂದು ಪರಿಗಣಿಸುತ್ತಿದ್ದರು. ಅವರು ಒಬ್ಬ **ಸೈನಿಕ**ನಾಗಿರಬಹುದು ಅಥವಾ **ಗುಲಾಮ**ನಾಗಿರಬಹುದು, ಶತಾಧಿಪತಿಯ ಒಂದು ವಾಡಿಕೆ ಅಪ್ಪಣೆ ಕೊಡುವಂಥದ್ದು (**"ಹೋಗು!" ... "ಬಾ!" ... "ಇದನ್ನು ಮಾಡು!"**) ಅವುಗಳನ್ನು ಮಾಡುವಂಥದ್ದು ಆಗಿತ್ತು. ಅವರು ಸಲಹೆ ಕೊಡುತ್ತಾರೆ, "ಅದೇ ರೀತಿಯಾಗಿ, ಆತನು ಮಾಡಿದ್ದಾನೆ, ಯೇಸು ದೇವರಿಂದ

ಅಧಿಕಾರವನ್ನು ಪಡೆದಿದ್ದಾನೆ, ಆ ಅಧಿಕಾರದಿಂದ ಕಾಣದ ಆತ್ಮಗಳು (ದೂತರ) ಅವೆಲ್ಲವುಗಳನ್ನು ಮಾಡಲು ಆತನು ಅಪ್ಪಣೆ ಕೊಡಲು ಅಧಿಕಾರವು ಅವಕಾಶಮಾಡುತ್ತದೆ."[11]

**ವಚನ 10. ಯೇಸು ಇದನ್ನು ಕೇಳಿ ಆಶ್ಚರ್ಯಪಟ್ಟು,** ಕ್ರಿಯಾಪದವಾಗಿರುವ "ಆಶ್ಚರ್ಯ" *(thaumazō)* ಎನ್ನುವಂಥದ್ದು ಇದನ್ನು ಕೆಲವು ಸಾರಿ ಇದನ್ನು ಯೇಸುವಿನ ಬೋಧನೆ ಮತ್ತು ಅದ್ಭುತಗಳಿಗೆ ಜನರ ಗುಂಪಿನ ಪ್ರತಿಕ್ರಿಯೆ ಆಶ್ಚರ್ಯವಾಗಿತ್ತು. ಹಾಗಿದ್ದರೂ, ಇದು ಯೇಸುವಿನ ಸ್ವಂತ ಆಶ್ಚರ್ಯಕ್ಕಾಗಿ ಉಪಯೋಗಿಸಲಾಗಿದೆ, ಇದು ಆತನ ಮಾನವಿಯತೆ ತೋರಿಸುತ್ತದೆ. ಈ ಮೂಲಪಾಠದಲ್ಲಿ ಮತ್ತು ಅದಕ್ಕೆ ಸಮವಾಗಿರುವಂಥದ್ದು ಶತಾಧಿಪತಿಯ ನಂಬಿಕೆಗೆ ಆತನು "ಆಶ್ಚರ್ಯಪಟ್ಟನು" (ನೋಡಿರಿ ಲೂಕ 7:9). ಮಾರ್ಕ 6:6ರಲ್ಲಿ, ಯೇಸು ತನ್ನ ಸ್ವಂತ ಊರು ನಜರೇತಿನಲ್ಲಿ ಆತನನ್ನು ನಿರಾಕರಿಸಿದಾಗಿ, "ಆತನು ಅವರ ಅಪನಂಬಿಕೆಗೆ ಆಶ್ಚರ್ಯಪಟ್ಟನು."

ಯೇಸು ಆತನೊಂದಿಗಿರುವ ಯೆಹೂದ್ಯರಿಗೆ ಹೀಗೆ ಹೇಳಿದನು, "**ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿಯೂ ಕಾಣಲಿಲ್ಲ.**" ಯೇಸು ಕೇವಲ ಎರಡು ಸಾರಿ ಮಾತ್ರ ಜನರಿಗೆ "ಶ್ರೇಷ್ಟ ನಂಬಿಕೆ" ಎಂದು ಹೇಳಿರುತ್ತಾನೆ: ಈ ಶತಾಧಿಪತಿಯ ಒಂದು ವಿಷಯದಲ್ಲಿ ಮತ್ತೊಂದು ಕಾನಾನ್ಯದ ಸ್ತ್ರೀಯ ವಿಷಯದಲ್ಲಿ 15:21-28ರಲ್ಲಿ ಈ ಇಬ್ಬರು ಅನ್ಯರಾಗಿದ್ದರು! ಪ್ರತಿಯೊಂದು ಈ ಘಟನೆಯು ಒಂದಕ್ಕೊಂದು ಬೇರೆಯಾಗಿವೆ, ಆತನು ದೂರದಿಂದಲೇ ಗುಣಪಡಿಸಿದನು. ಯೇಸು ಅಸ್ವಸ್ಥರನ್ನು ನೇರವಾಗಿ ಮಾತಿನಿಂದಲೆ ಗುಣಪಡಿಸಿದನು ಮತ್ತು ಮುಟ್ಟುವದರಿಂದ ಗುಣಪಡಿಸಿದನು. ಈ ಪದ "ನಂಬಿಕೆ" ಎನ್ನುವಂಥದ್ದು ಮೊದಲನೆಯ ಸಾರಿ ಮತ್ತಾಯನಲ್ಲಿ ಕಾಣಿಸಿಕೊಂಡಿದೆ (8:10; 9:2, 22, 29; 15:28; 17:20; 21:21; 23:23). ಸ್ವಲ್ಪ ಸಮಯದ ತರುವಾಯ ತನ್ನ ಶಿಷ್ಯರಿಗೆ "ಅಲ್ಪ ವಿಶ್ವಾಸಕ್ಕಾಗಿ" ಗದರಿಸಿದನು (8:26).

**ವಚನ 11.** ಯೇಸುವಿನ ಪ್ರವಾದನೆ **ಅನೇಕರು ಮೂಡಣ ಪಡುವಣ** ದಿಕ್ಕಿನಿಂದ ಬರುವದರ ಕುರಿತಾಗಿದೆ ಅದು ಭೂಲೋಕದ ಜನರನ್ನು ಸೂಚಿಸುತ್ತದೆ. ಲೂಕನು ಅದಕ್ಕೆ ಸ್ವಲ್ಪ ಕೂಡಿಸಿ ಉತ್ತರ ದಿಕ್ಕಿನಿಂದ ಮತ್ತು ದಕ್ಷಿಣದಿಂದ ಎಂದು ಹೇಳಿದ್ದಾನೆ (ಲೂಕ 13:29). ಕಣ್ಣಿಗೆ ಕಾಣುವದು ಒಂದೆ ಕಡೆ ವಾಸವಾಗಿರುವವರು ಇಸ್ರಾಯೇಲ್ಯರ ಒಳಗಡೆ ಇರುವಂಥವರು. ಇದಕ್ಕೆ ಸಮವಾಗಿರುವ ಭಾಷೆ ಹಳೆ ಒಡಂಬಡಿಕೆಯಲ್ಲಿ ಯೆಹೂದ್ಯರು ಸೇರೆಯಿಂದ ಬಿಡುಗಡೆಯಾಗಿ ವಾಪಸ್ಸು ಬಂದಿರುವ ವಿಷಯವಾಗಿದೆ (ಕೀರ್ತನೆ 107:2, 3; ಯೆಶಾಯ 43:5, 6; 49:8-13). ಹಾಗಿದ್ದರೂ, ಇಲ್ಲಿರುವ ಭಾಷೆಯು ಮುಖ್ಯವಾಗಿ ಅನ್ಯರಿಗೆ ಅನ್ವಹಿಸುವಂಥದ್ದಾಗಿದೆ.

ಯೇಸು ಹೇಳಿದ್ದೇನೆಂದರೆ ಅನೇಕ ಜನರು ಬಂದರು ಮತ್ತು ಮೇಜಿಗೆ ಒರಗಿಕೊಂಡರು. ಇದು ವಾಡಿಕೆಯ ಆಚರಣೆಯಾಗಿತ್ತು. ಕೊನೆಪಕ್ಷ ಕೆಲವು ಸಂದರ್ಭಗಳಲ್ಲಿ **ಜನರು ಆರಾಮ ಕುರ್ಚಿ** ಅಥವಾ ದಿಂಬುಗಳಿಗೆ ಒರಗಿಕೊಳ್ಳುವರು ಹಬ್ಬದ ಸಂದರ್ಭಗಳಲ್ಲಿ, ಅವರ ಕಾಲುಗಳನ್ನು ಮೇಜಿನಿಂದ ದೂರ ಚಾಚುತ್ತಾರೆ. ಅವರು ಮೊಳಕೈಯನ್ನು ಊರಿಕೊಂಡು ಬಲಗೈಯಿಂದ ತಿನ್ನುತ್ತಾರೆ. ಈ ಮೇಜಿನ ಅನ್ಯೋನ್ಯತೆಗೆ ಸಂಬಂಧಿಸಿದಂತೆ S. Scott Bartchy ಬರೆದಿದ್ದಾರೆ, "ಊಟದ ಸಮಯವು ವೈಯಕ್ತಿಕವಾಗಿ ಪುಷ್ಠಿಯುಳ್ಳ ಆಹಾರ ತಿನ್ನುವದಕ್ಕಿಂತ ಎಷ್ಟೋ ಹೆಚ್ಚಿನ ಸಂದರ್ಭ ಸಮಯವಾಗಿರುತ್ತದೆ. ಇನ್ನೊಬ್ಬ ವ್ಯಕ್ತಿಯನ್ನು ಊಟಮಾಡುವ ಉದ್ದೇಶಕ್ಕಾಗಿ ಆತನನ್ನು ಮೇಜಿಗೆ ಆಹ್ವಾನಿಸಿ ಅದು ಸ್ನೇಹದ ಒಂದು ಸಂತೋಷ ಕೂಟ, ಆತ್ಮೀಯತೆ ಮತ್ತು ಒಗ್ಗಟ್ಟಿನ ಗುರುತಾಗಿರುತ್ತದೆ."[12] ಅಂಥಹ ಸಂದರ್ಭಗಳನ್ನು ಮಹಾ ಸಂತೋಷದ ಸಂದರ್ಭವೆಂದು ಹೇಳಬಹುದು. ಇಲ್ಲಿ ಈ ಕಲ್ಪನೆಯನ್ನು ಮೆಸ್ಸೀಯನ ಪ್ರವಾದನೆ ಅದು ಯೆಶಾಯ 25:6-9ರಲ್ಲಿರುವಂಥದ್ದನ್ನು ತೆಗೆದುಕೊಳ್ಳಲಾಗಿದೆ, ಅಲ್ಲಿ ದೇವರು ಎಲ್ಲಾ ಜನಾಂಗಗಳಿಗೆ ಔತಣವನ್ನು ಸಿದ್ಧಮಾಡುವನು.

**ಪರಲೋಕ ರಾಜ್ಯದಲ್ಲಿ ಅಬ್ರಹಾಮ ಇಸಾಕ್ ಯಾಕೋಬ ಎಂಬವರ ಸಂಗಡ ಊಟಕ್ಕೆ ಕೂರುವರು** ಈ ಔತಣಕೂಟವನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬೇಕು? ಎರಡು ಸಾಧ್ಯತೆಗಳನ್ನು ಇಲ್ಲಿ ಹೇಳಬಹುದು. ಮೊದಲನೆಯದು, ಅನ್ಯರು ದೇವರ ರಾಜ್ಯದಲ್ಲಿ ಸೇರಿಬರುವವರು ಅದು ಸಭೆಯಾಗಿರುವದು ಎಂದು ಸೂಚಿಸಬಹುದು. ಬಹುಶಃ ಯೇಸು ಈ ಶತಾಧಿಪತಿಯ ನಡತೆಯ ನೋಡುವಾಗ ರಕ್ಷಣೆಗಾಗಿ ದೇವರ ಶ್ರೇಷ್ಟಯೋಜನೆ ಅದು ಯೆಹೂದ್ಯರಿಗೂ ಮತ್ತು ಅನ್ಯರಿಗೂ ಒಂದೇ ರೀತಿಯಲ್ಲಿ ಮುಟ್ಟುವಂಥದ್ದಾಗಿದೆ (ನೋಡಿರಿ ಅಪೊಸ್ತಲರ ಕೃತ್ಯಗಳು 10). ಇದು ಈ ರೀತಿಯಾಗಿಯೇ ಇರುವುದಾಗಿದೆ, ಈ ಭಾಗವು "ಪರಲೋಕ ರಾಜ್ಯದಲ್ಲಿ" ಎನ್ನುವಂಥದ್ದು ಸಭೆಗೆ ಇನ್ನೊಂದು ಸೂಚನೆಯಾಗಿದೆ, ಅದುವೆ ಯೇಸು ಸ್ಥಾಪಿಸಲು ಬಂದನು.[13]

ಇನ್ನೊಂದು ಸಾಧ್ಯತೆ ಇದೆ ಏನೆಂದರೆ ಔತಣ ಕೂಟವು ಅನ್ಯರು ಒಂದಾಗಿ ಕುಟುಂಬದ ಯಜಮಾನನೊಂದಿಗೆ ಪರಲೋಕ ರಾಜ್ಯದ ತಂದೆಯೊಂದಿಗೆ ಸೇರಿಬರುವದನ್ನು ಸೂಚಿಸುತ್ತದೆ.[14] ಈ ಎರಡನೆಯ ಅಂಶವು ವಚನ 12ರಲ್ಲಿರುವ ಆದಾರದೊಂದಿಗೆ ಪುಷ್ಠಿ ಹೊಂದುತ್ತದೆ ನ್ಯಾಯತೀರ್ಪುನ ದಿನದಂದು "ಆ ರಾಜ್ಯದ ಬಾಧ್ಯಸ್ಥರನ್ನು" "ಹೊರಗೆ ಕತ್ತಲೆಗೆ ಹಾಕಲ್ಪಡುವರು."

ಈ ಎರಡು ಅವಲೋಕಗಳು ಬಹಳ ಹತ್ತಿರವಾದ ಸಂಪರ್ಕ ಹೊಂದಿರುತ್ತವೆ, ಅವರೆಡು ನಿತ್ಯಜೀವದ ಕಡೆಗೆ ತೆಗೆದುಕೊಂಡು ಹೋಗುವಂಥವುಗಳಾಗಿವೆ. ಯಾವಾಗ ಕ್ರಿಸ್ತನು ಪುನಃ ಬರುವನೋ ಆಗ ರಾಜ್ಯವು (ಸಭೆಯು) ಆತನು ಸ್ಥಾಪಿಸಿದ ಈ ರಾಜ್ಯವು ತಂದೆಯ ನಿತ್ಯ ರಾಜ್ಯವಾಗುತ್ತದೆ (1 ಕೊರಿಂಥ 15:24; 2 ಪೇತ್ರ 1:11; ಪ್ರಕಟಣೆ 11:15). ಮೊದಲನೆಯ ಅಂಶವು ಒತ್ತಿ ಹೇಳುವದೇನೆಂದರೆ ಒಬ್ಬನು ಅನ್ಯೋನ್ಯತೆಗೆ ಸೇರಿಬರುವಾಗ ಅವನು ಈ ಲೋಕದಲ್ಲಿ ದೇವರ ರಾಜ್ಯದ ಒಂದು ಭಾಗವಾಗಿರುತ್ತಾನೆ, ಈ ಅನ್ಯೋನ್ಯತೆಯು ಅತಿಬೇಗನೆಯಾಗುವ ಬರುವ ಲೋಕದಲ್ಲಿ ಭವ್ಯವಾದ ಅನ್ಯೋನ್ಯತೆಯಲ್ಲಿ ಅವನು ಇರುವನು. ಎರಡನೆಯ ಅಂಶವು ಸಂಪೂರ್ಣವಾಗಿ ಕೇಂದ್ರಿಕರಿಸುವ ವಿಷಯ ಅತ್ಯಾನಂದಪಡುವಂಥದ್ದಾಗಿದೆ ಅದೇನೆಂದರೆ ಮುಂದೆ ಬರುವ ಲೋಕದಲ್ಲಿ ಯೆಹೂದ್ಯರು ಮತ್ತು ಅನ್ಯರು ಒಂದೇ ರೀತಿಯಾಗಿ ಅಂದರೆ ಒಂದೇ ಸಮಾನ ಸದೃಷರಾಗಿರುತ್ತಾರೆ ಎಂಬುದು ಗೊತ್ತಾಗುತ್ತದೆ.

**ವಚನ 12.** ಅನ್ಯರು ಪರಲೋಕ ರಾಜ್ಯದಲ್ಲಿ ಸೇರಿಕೊಂಡಿರುವಾಗ, ಅನೇಕರು ತಮ್ಮಲ್ಲಿ ಆಲೋಚಿಸುತ್ತಾರೆ ಆ ರಾಜ್ಯದ ಪ್ರಜೆಗಳು ಅಲ್ಲಿಂದ ಹೊರಗೆ ಹಾಕಲ್ಪಡುವರು. ಈ ರಾಜ್ಯದ ಬಾಧ್ಯಸ್ಥರು ಯಾಕೆಂರದೆ ಮೆಸ್ಸಿಯನಾಗಿರುವ ಯೇಸುವನ್ನು ನಿರಾಕರಿಸಿದ ಯೆಹೂದ್ಯರು. ಅವರು ಮೊದಲು ದೇವರು ವಾಗ್ದಾನಗಳನ್ನು ಮಾಡಿದ ಅಬ್ರಹಾಮನ ಸಂತಾನದವರಾಗಿದ್ದರು (ಆದಿಕಾಂಡ 12:1-3), ಆದರೆ ಅವರು ಅಬ್ರಹಾಮನ ನಂಬಿಕೆಯನ್ನು ಅನುಕರಿಸಲಿಲ್ಲ (ನೋಡಿರಿ 3:8, 9ರ ಮೇಲಿನ ವ್ಯಾಖ್ಯಾನ). ತರುವಾಯ, ಯೇಸು ಕೆಲವು ಯೆಹೂದ್ಯರಿಗೆ ಹೀಗೆ ಹೇಳಿದನು, "... ದೇವರ ರಾಜ್ಯವು ನಿಮ್ಮಿಂದ ತೆಗೆಯಲ್ಪಟ್ಟು, ಅದರ ಫಲಗಳನ್ನು ಕೊಡುವ ಜನಕ್ಕೆ ಕೊಡಲಾಗುವದು" (21:43).

ನಂಬದೆ ಇರುವ ಯೆಹೂದ್ಯರಿಗೆ ಯೇಸು, **ಅವರನ್ನು ಹೊರಗೆ ಕತ್ತಲೆಗೆ ಹಾಕಲ್ಪಡುವರು; ಅಲ್ಲಿ ಗೋಳಾಟವು ಕಟಕಟನೆ ಹಲ್ಲು ಕಡಿಯೋಣವು ಇರುವವು ಎಂದು ಹೇಳಿದನು.** ಹೊಸ ಒಡಂಬಡಿಕೆಯಲ್ಲಿ ನರಕವನ್ನು ಸೂಚಿಸುವುದಕ್ಕೆ ಇದು ಅದಕ್ಕೆ ಸಮರೂಪವಾಗಿ ವಿವರಿಸಲಾಗಿದೆ (ಲೂಕ 13:28; 2 ಪೇತ್ರ 2:17; ಯೂದನು 13). Jack P. Lewis ಬರೆದಿದ್ದಾರೆ,

> *ಹೊರಗಡೆ ಕತ್ತಲು* ಈ ಭಾಗದ ವಿವರಣೆಯು ದುಷ್ಟನು ನೋವು ಅನುಭವಿಸುವದು ಮತ್ತಾಯನಿಗೆ ಅಸಾಧಾರವಾಗಿದೆ (22:13; 25:30), ಆದರೆ ಈ ಕಲ್ಪನೆಯು ಊಹಿಗೆ

> ಸಂಬಂಧಪಟ್ಟಿರುವದು ಎಂದು ನಿರೀಕ್ಷಿಸಲಾಗಿದೆ ... ಅಲ್ಲಿ ಗೋಳಾಟವು ಕಟಕಟನೆ ಹಲ್ಲು ಕಡಿಯೋಣವೂ ಇರುತ್ತದೆ, ಇಂಥಹ ವಾಕ್ಯವನ್ನು ಮತ್ತಾಯ ಸುವಾರ್ತೆಯಲ್ಲಿ ಆರು ಸಾರಿ ನೋಡಬಹುದು (8:12; 13:42, 50; 22:13; 24:51; 25:30; ಹೋಲಿಸಿ  ಲೂಕ 13:28), ಇದಕ್ಕಿಂತ ಮೊದಲೆ ಇದನ್ನು ಕೀರ್ತನೆ 112:10ರಲ್ಲಿ ಆಗಿರುವದನ್ನು ನೋಡುತ್ತೇವೆ ದುಷ್ಟನು ನೀತಿವಂತನ ಅಭಿವೃದ್ಧಿಯನ್ನು ನೋಡಿ ಪ್ರತಿಕ್ರಿಯಿಸಿದ್ದನ್ನು ಇಲ್ಲಿ ವರ್ಣಿಸಲಾಗಿದೆ.[15]

ಶಾರೀರಿಕವಾಗಿ ಅಬ್ರಹಾಮನ ಸಂತತಿಯವರಾಗಿದ್ದರೆ ಅವರಿಗೆ ದೇವರ ರಾಜ್ಯದಲ್ಲಿ ಸ್ಥಾನದ ಕುರಿತು ಭರವಸೆ ಕೊಟ್ಟಿರುವದಿಲ್ಲ, ಇಲ್ಲವೆ ಅವನ ಆತ್ಮವನ್ನು ಅಲ್ಲಿ ಹೋಗುವದನ್ನು ತಪ್ಪಿಸುವದು ಸಹ ಇಲ್ಲ, ಹಾಗಿದ್ದರೂ, ಒಬ್ಬನಿಗೆ ಎಲ್ಲಾ ರೀತಿಯ ಅನುಕೂಲತೆಗಳು ಅವಕಾಗಳು ಇವೆ ಅದೇನೆಂದರೆ ಅವನು ಯೇಸುವನ್ನು ಮೆಸ್ಸೀಯನೆಂದು ಗುರುತಿಸಲು ಸಿದ್ಧನಾಗಬೇಕು ಮತ್ತು ಆದರೂ ಅವನು ಉತ್ತಮ ಅವಕಾಶವನ್ನು ಇದನ್ನು ದಾಟಿ ಹೊಗಲು ಉಪಯೋಗಿಸಿಕೊಳ್ಳಬೇಕು. ಪ್ರತಿಕೂಲದಲ್ಲಿರುವ ವ್ಯಕ್ತಿಯು ಎದ್ದು ಅವನು ದೇವರ ರಾಜ್ಯವನ್ನು ಪ್ರವೇಶಿಸುವನು.

**ವಚನ 13.** ತನ್ನ ಹಿಂದೆ ಬರುತ್ತಿದ್ದವರಿಗೆ ಹೇಳಿದ ತರುವಾಯ, ಯೇಸು ಶತಾಧಿಪತಿಯ ಸಂದೇಶಕರ ಕಡೆಗೆ ಹಿಂದಕ್ಕೆ ತಿರುಗಿ: **ನೀನು ನಂಬಿದಂತೆ ನಿನಗಾಗಲಿ ಹೋಗು ಎಂದನು.** ಪ್ರತಿಯೊಂದು ಸ್ವಸ್ತತೆಯ ವಿಷಯದಲ್ಲಿ ಯೇಸುವಿನಲ್ಲಿ ನಂಬಿಕೆ ಇಡಬೇಡೆಂದು ಇದರರ್ಥವಲ್ಲ, ಯಾರು ಸ್ವಸ್ತನಾಗುತ್ತಾನೋ ಅವರಾಗಿರಬಹುದು ಇಲ್ಲವೆ ಅವನಿಗಾಗಿ ಯಾರು ಕೇಳಿಕೊಳ್ಳುತ್ತಾರೋ ಅವರಾದರು ನಂಬಿಕೆ ಇಡಬಹುದು. ಹಾಗಿದ್ದರೂ, ಶತಾಧಿಪತಿಯು ಯೇಸು ದೂರದಿಂದಲೆ ತನ್ನ ಆಳನ್ನು ಗುಣಪಡಿಸುತ್ತಾನೆ ಎಂದು ಸಂಪೂರ್ಣ ನಂಬಿಕೆ ವ್ಯಕ್ತಪಡಿಸಿದನು, ಆತನ ನಂಬಿಕೆ ಗೌರವಿಸಲ್ಪಟ್ಟಿತ್ತು: **ಅದೇ ಗಳಿಗೆಯಲ್ಲಿ ಅವನ ಆಳಿಗೆ ಗುಣವಾಯಿತು.** ಗ್ರೀಕ್ ಮೂಲ ಪಠ್ಯದಲ್ಲಿ ಸ್ಪಷ್ಟವಾಗಿ ಹೇಳುತ್ತದೆ ಅವನು "ಅದೇ ಒಂದು ತಾಸಿ"ನಲ್ಲಿ ಗುಣಹೊಂದಿದನು (ನೋಡಿರಿ ಯೋಹಾನ 4:53). ಲೂಕನು ಇದಕ್ಕೆ ಸೇರಿಸಿ ಹೀಗೆ ಹೇಳಿದ್ದಾನೆ. "ಆ ಶತಾಧಿಪತಿಯ ಕಡೆಯಿಂದ ಬಂದವರು ತಿರುಗಿ ಮನೆಗೆ ಹೋಗಿ ಆಳು ಆರೋಗ್ಯವಾಗಿರುವದನ್ನು ಕಂಡರು" (ಲೂಕ 7:10).

## ಪೇತ್ರನ ಅತ್ತೆಯನ್ನು ಸ್ವಸ್ಥಮಾಡಿದ್ದು (8:14, 15)

**[14]ತರುವಾಯ ಯೇಸು ಪೇತ್ರನ ಮನೆಗೆ ಬಂದು ಅವನ ಅತ್ತೆ ಜ್ವರದಲ್ಲಿ ಬಿದ್ದಿರುವದನ್ನು ಕಂಡು ಆಕೆಯ ಕೈಯನ್ನು ಮುಟ್ಟಿದ್ದನು. [15]ಮುಟ್ಟಿದಾಗಲೇ ಜ್ವರವು ಆಕೆಯನ್ನು ಬಿಟ್ಟುಹೋಯಿತು; ಆಕೆ ಎದ್ದು ಆತನಿಗೆ ಉಪಚಾರಮಾಡಿದಳು.**

**ವಚನ 14.** ಈ ಸ್ವಸ್ಥತೆಯು **ಪೇತ್ರನ ಮನೆಯಲ್ಲಿ** ನಡೆಯಿತು. ಸೀಮೋನ ಪೇತ್ರನು ಗಲಿಲಾಯ ಸಮುದ್ರದಲ್ಲಿ ಮೀನುಗಾರನಾಗಿದ್ದನು, ಯೇಸುವಿನ ಶಿಷ್ಯನಾಗಲು ಕರೆಯಲ್ಪಟ್ಟನು ತರುವಾಯ ಅಪೊಸ್ತಲನೆಂದು ನೇಮಕಗೊಂಡನು (ನೋಡಿರಿ ವ್ಯಾಖ್ಯಾನ 4:18-20; 10:1, 2). ಈತನು ಮತ್ತು ಈತನ ಸಹೋದರ ಆಂದ್ರೆಯನು ಇವರು ಬೆತ್ಸಾಯಿದ ಎಂಬ ಊರಿನವರು (ಯೋಹಾನ 1:44), ಆದರೆ ಕಪೆರ್ನೌಮಿಗೆ ಅವರು ವಾಸಮಾಡುವದಕ್ಕಾಗಿ ಬಂದರು. ಮಾರ್ಕ ಸುವಾರ್ತೆಯಲ್ಲಿ "ಸಿಮೋನ ಮತ್ತು ಆಂದ್ರೆಯನ ಮನೆ"ಯೆಂದು ವರ್ಣಿಸಲಾಗಿದೆ (ಮಾರ್ಕ 1:29). ಅನೇಕ ತಲೆಮಾರುಗಳು ಆ ಮನೆಯಲ್ಲಿದ್ದರು, ಕುಟುಂಬ ಬೆಳೆದು ಅದೇ ಮನೆಯಲ್ಲಿ ವಾಸವಾಗಿದ್ದರು. ಆಂದ್ರೆಯ (ಮತ್ತು ಆತನ ಹೆಂಡತಿ?) ಮುಂದೆ ಸಹಜವಾಗಿ ಮನೆಯನ್ನು ಪೇತ್ರ ಮತ್ತು ಆತನ ಹೆಂಡತಿಯೊಂದಿಗೆ ಹಂಚಿಕೊಂಡನು (ನೋಡಿರಿ 1 ಕೊರಿಂಥ 9:5). ಅದೇ ರೀತಿಯಾಗಿ ಪೇತ್ರನ ಅತ್ತೆಯು ಸಹ ಅವರೊಂದಿಗೆ

ವಾಸವಾಗಿದ್ದಳು. ಇದಕ್ಕೆ ವಿಷಯ ಕೂಡಿಸುವಾಗ, ಯೇಸು ನಜರೇತನ್ನು ಬಿಟ್ಟು ಇಲ್ಲಿಗೆ ಬಂದಾಗ ಪೇತ್ರನ ಮನೆಯನ್ನು ತನ್ನ ಸೇವೆಯ ಕೇಂದ್ರವನ್ನಾಗಿ ಮಾಡಿಕೊಂಡಿರುವದು ಕಂಡುಬರುತ್ತದೆ (4:13; ಮಾರ್ಕ 1:35; 2:1).

ಯೇಸು ಈ ಮನೆಗೆ ಬಂದಾಗ ಪೇತ್ರನ ಅತ್ತೆ **ಹಾಸಿಗೆಯಲ್ಲಿ ಜ್ವರದಿಂದ ಬಿದ್ದಿದ್ದಳು.** ಮಾರ್ಕನು ಮತ್ತು ಲೂಕ ಇಬ್ಬರು ಹೆಸರಿಲ್ಲದ ವ್ಯಕ್ತಿಗಳನ್ನು ಸೂಚಿಸಿದ್ದಾರೆ (ಅಲ್ಲಿ "ಅವರು" ಎಂದು ಹೇಳಲಾಗಿದೆ) ಆ ಸ್ತ್ರೀಯ ಅಸ್ವಸ್ಥೆಯ ಬಗ್ಗೆ ಯೇಸುವಿಗೆ ತಿಳಿಸಿದರು. ಹಾಗಿದ್ದರೂ, "ಅವರು" ಎಂದರೆ ಅಂದ್ರೆಯ, ಯಾಕೋಬ ಮತ್ತು ಯೋಹಾನರನ್ನು ಸೂಚಿಸಿರಬಹುದು (ಮಾರ್ಕ 1:29, 30). ಆ ಸ್ತ್ರೀಯು ಬಹಳ "ಕಠಿಣ"ವಾದ ಜ್ವರದಿಂದ ಕಷ್ಟಪಡುತ್ತಿದ್ದಳು (ಲೂಕ 4:38). ಮೂಲ ಅಧ್ಯಾಯದಲ್ಲಿ ಕಾಯಿಲೆಯ ಸ್ವರೂಪ ಕೊಟ್ಟಿರುವದಿಲ್ಲ, ಆದಾಗ್ಯೂ ಆ ವಯಸ್ಸಿನಲ್ಲಿ ಅನಾರೋಗ್ಯಕ್ಕೆ ಜ್ವರವೇ ಇರಬಹುದು ಮತ್ತು ಅದರ ಲಕ್ಷಣವಲ್ಲ ಎಂದುಕೊಂಡಿದ್ದರು (ನೋಡಿರಿ ಯೋಹಾನ 4:52; ಅಪೊಸ್ತಲರ ಕೃತ್ಯಗಳು 28:8). ಆಕೆಯು ಎದ್ದೇಳುವದಕ್ಕೂ ಮತ್ತು ಅವರ ಮನೆಗೆ ಹೊಸದಾಗಿ ಬಂದಿರುವಂಥವರಿಗೆ ಉಪಚರಿಸುವದಕ್ಕೂ ಆಕೆಗೆ ಆಗಲಿಲ್ಲ ಎನ್ನುವಾಗ ಅದು ಗಂಭೀರವಾದ ಕಾಯಿಲೆ ಆಗಿರಬಹುದು ಎಂದು ತಿಳಿದುಬರುತ್ತದೆ.

**ವಚನ 15.** ಯೇಸು ಜ್ವರದಿಂದಿರುವ ಆ **ಕೈಯನ್ನು** ಮುಟ್ಟಿದನು - ಈ ಕಾರ್ಯವು ಯೆಹೂದ್ಯ ಸಂಪ್ರದಾಯದಿಂದ ನಿಷೇಧಿಸಲ್ಪಟ್ಟಿತ್ತು.[16] - ಮತ್ತು **ಜ್ವರವು** ನಿರ್ಮೂಲವಾಯಿತು. ತರುವಾಯ ಆಕೆ ಎದ್ದು ಆತನಿಗೆ ಉಪಚರಿಸಿದಳು. **ಆದರೂ ಆಕೆ ಇತರರಿಗೂ ಉಪಚರಿಸಿದಳು,** ನಿಜವಾಗಿಯೂ ಆಕೆ ವಿಶೇಷವಾಗಿ ಗುಣಹೊಂದಿದ ತರುವಾಯ ಯೇಸುವಿಗೆ ಲಕ್ಷ್ಯಕೊಟ್ಟಳು.

## ಯೇಸುವಿನ ಸ್ವಸ್ಥತೆಯ ಸಾರಾಂಶ (8:16, 17)

**16ಸಂಜೆಯಾಗಲು ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲನ್ನು ವಾಸಿಮಾಡಿದನು. 17ಇದರಿಂದ - ನಮ್ಮ ಬೇನೆಗಳನ್ನು ತಾನೆ ತೆಗೆದುಕೊಂಡು ನಮ್ಮ ರೋಗ ಗಳನ್ನು ಹೊತ್ತುಕೊಂಡನು ಎಂದು ಯೆಶಾಯನೆಂಬ ಪ್ರವಾದಿಯಿಂದ ಹೇಳಿರುವ ಮಾತು ನೆರವೇರಿತು.**

**ವಚನ 16.** ಯೇಸು ಕಪೆರ್ನೌಮಿಗೆ ಹೋದಾಗ, ಆತನು "ತಕ್ಷಣವೇ" ಸಬ್ಬತ್ ದಿನದಂದು ಯೆಹೂದ್ಯ ಸಭಾಮಂದಿರವನ್ನು ಪ್ರವೇಶಿಸಿದನು (ಮಾರ್ಕ 1:21; ನೋಡಿರಿ ಲೂಕ 4:31, 33). ಆತನು ಅಲ್ಲಿರುವಾಗ ದೆವ್ವಗಳ ಹಿಡಿದವನೊಬ್ಬನನ್ನು ಸಂದಿಸಿದನು. ಇಲ್ಲಿ ಬಹು ವಚನವನ್ನು ಸೂಚಿಸಿರುವದು ತಿಳಿದು ಬರುತ್ತದೆ. ಯೇಸು ದೆವ್ವಗಳಿಗೆ ಗದರಿಸಿ ಹೇಳಿದನು, "ಸುಮ್ಮನಿರು, ಮತ್ತು ಅವನನ್ನು ಬಿಟ್ಟು ಹೋಗು" (ಮಾರ್ಕ 1:25). ಈ ಸ್ವಸ್ಥತೆಯ ಕಾರಣ "ಆತನ ಸುದ್ದಿಯು ಗಲಿಲಾಯ ಪ್ರಾಂತದ ಸುತ್ತಾಮುತ್ತಾ ಎಲ್ಲಾ ಕಡೆ ಹಬ್ಬಿತ್ತು" (ಮಾರ್ಕ 1:28; ನೋಡಿರಿ ಲೂಕ 4:37).

ಅನೇಕ ಯೆಹೂದ್ಯರು ತಮ್ಮಲ್ಲಿ ಅಸ್ವಸ್ಥರಾದವರನ್ನು ಸಬ್ಬತ್ ಮುಗಿಯುವದರೊಳಗಾಗಿ ಯೇಸುವಿನಲ್ಲಿಗೆ ತೆಗೆದುಕೊಂಡು ಬರಲು ಹೆದರುತ್ತಿದ್ದರು. ಕೆಲವರು ಅಸ್ವಸ್ಥರಾದವರನ್ನು ತೆಗೆದುಕೊಂಡು ಬಂದರು ಅದರಲ್ಲಿ ಯಾವುದೇ ಸಂಶಯವಿಲ್ಲ, ಮತ್ತು ಕೆಲವು ಯೆಹೂದ್ಯ ನಾಯಕರು ಅವರ ಪ್ರೀಯರನ್ನು ಸಬ್ಬತ್ ದಿನದಂದು ಸ್ವಸ್ಥಮಾಡಿಸಿಕೊಳ್ಳುವದು ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿದೆ ಎಂದು ಹೇಳಿದನು (ಯೋಹಾನ 5:10).[17] ಆದದರಿಂದ ಜನರು ಯೇಸುವಿನ ಮುಂದೆ ಬರಲು ಸೂರ್ಯಮುಳುಗುವದನ್ನು ಕಾಯುತ್ತಿದ್ದರು (ಮಾರ್ಕ

1:32; ಲೂಕ 4:40). ಯೆಹೂದ್ಯರು ಒಂದು ದಿನವನ್ನು ಸೂರ್ಯನು ಮುಳುಗುವುದರಿಂದ ಸೂರ್ಯನು ಮುಳುಗುವವರೆಗೆ ಲೆಕ್ಕ ಮಾಡುತ್ತಿದ್ದರು (ಆದಿಕಾಂಡ 1:5, 8, 13, 19, 23, 31). **ಸಾಯಂಕಾಲ ಬರುವಾಗ** ಸಬ್ಬತ್ ಮುಗಿಯುತ್ತದೆ, ಮತ್ತು ವಾರದ ಮೊದಲನೆ ದಿನ ಪ್ರಾರಂಭವಾಗುತ್ತದೆ.

ಆತನು ಅನೇಕ ಸಾರಿ ಸಮಯಕ್ಕಿಂತ ಮುಂಚೆ - ಮತ್ತು ತರುವಾಯ ಸ್ವಸ್ಥತೆ ಮಾಡಿದನು. ಪುನಃ ಮಾಡಿದನು - ಯೇಸು ಅವರ ನಂಬಿಕೆಯ ಅಳತೆ ಹೊರತು ಪಡಿಸಿ - ಅವರ ರೋಗವನ್ನು ಅಥವಾ ಅವರ ಅಸ್ವಸ್ಥತೆಯನ್ನು ಗುಣಪಡಿಸಿದನು. ಏನೇ ಆದರೂ, ಮತ್ತಾಯನ ಪ್ರಕಾರ ಇಲ್ಲಿ ಅವರು **ದೆವ್ವ ಹಿಡಿದವರು** ಮತ್ತು **ಹಲವರು ಅಸ್ವಸ್ಥರಾಗಿದ್ದರು** ಎಂದು ಭಿನ್ನತೆಯನ್ನು ಬರಮಾಡಿದ್ದಾನೆ (ನೋಡಿರಿ 4:23, 24). ಯೇಸುವಿನ ಬಲವು ಇಲ್ಲಿ ದೃಢಪಟ್ಟಿದೆ ಅದು ಆತನು ಮಾತು ಮಾತ್ರದಿಂದಲೆ ದೆವ್ವಗಳನ್ನು ಬಿಡಿಸಿದನು. ಸ್ವಲ್ಪ ಭಿನ್ನವಾಗಿ, ಹಿಂದಿನ ಕಾಲದಲ್ಲಿ ದೆವ್ವ ಬಿಡಿಸುವವರು ಅವುಗಳನ್ನು ಮನುಷ್ಯರಿಂದ ಹೊರಗೆ ತರುವದಕ್ಕೆ ಮಂತ್ರವನ್ನು ಉಚ್ಚಾರ ಮಾಡುತ್ತಿದ್ದರು, ಇನ್ನೂ ದೊಡ್ಡ ದೆವ್ವಗಳನ್ನು ಆಹ್ವಾನಿಸುತ್ತಿದ್ದರು, ಮತ್ತು ಮೀನುಗಳ ಕೆಲವು ಅಂಗಾಗಳನ್ನು ಸುಟ್ಟು ದುರ್ವಾಸನೆ ಮಾಡಿ ಅಥವಾ ಬೇರಿನ ವಾಸನೆಯಿಂದ ಇವೆಲ್ಲವುಗಳನ್ನು ಮಾಡಿ ದೆವ್ವಗಳನ್ನು ಬಿಡಿಸುತ್ತಿದ್ದರು.[18] Graham H. Twelftree, ರವರು ಅನೇಕ ಅಂಶಗಳನ್ನು ಇಲ್ಲಿ ಸೇರಿಸಿದ್ದಾರೆ:

> ಬಾಬೇಲ್ ಧರ್ಮಶಾಸ್ತ್ರದಲ್ಲಿ ದೆವ್ವಗಳನ್ನು ಬಿಡಿಸಲು, ತಾಯಿತ, ಖರ್ಜೂರ ಮರದ ಸಣ್ಣ ಮುಳ್ಳುಗಳು, ಕಟ್ಟಿಗೆ ತುಂಡುಗಳು, ಬೂದಿ, ಕಪ್ಪುರಾಳ, ಜೀರಿಗೆ ನಾಯಿ, ಕೂದಲು ಮತ್ತು ದಾರವನ್ನು ಉಪಯೋಗಿಸುತ್ತಿದ್ದರು; Lucian ಅವರು ಹೇಳುತ್ತಾರೆ ಕಬ್ಬಿಣದ ಉಂಗುರ ಮತ್ತು ಒಂದು ತರಹದು ಹುಲ್ಲು (ಐಗುಪ್ತದಲ್ಲಿ ಬೆಳೆಯುವ ಎತ್ತರವಾದ ಸಸ್ಯ) ದೆವ್ವ ಬಿಡಿಸುವವರು ತಾಯಿತ, ಅಂಜೂರದ ಕೊಂಬೆಗಳು, ಪುದಿನ ಜಾತಿಗೆ ಸೇರಿದ ಒಂದು ಸಸ್ಯ ಮತ್ತು ವಿಚಿತ್ರವಾದ ವಿಶೇಷ ಧ್ವನಿಗಳನ್ನು ದೆವ್ವಗಳನ್ನು ಬಿಡಿಸಲು ಉಪಯೋಗಿಸುತ್ತಿದ್ದರು ಎಂದು ಹೇಳುತ್ತಾರೆ.[19]

**ವಚನ 17.** ಯೇಸುವಿನ ಸ್ವಸ್ಥತಾ ಸೇವೆಯು ಮತ್ತಾಯನು ಹೇಳುವಂತೆ ಅದು ಪ್ರವಾದಿ ಯಾದ ಯೆಶಾಯನು ಹೇಳಿದ ಪ್ರವಾದನೆ ನೇರವೇರಿತು ಎಂಬಾದಾಗಿ: **ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡು ನಮ್ಮ ರೋಗಗಳನ್ನು ಹೊತ್ತು ಕೊಂಡನು.** ಆತನ ಹೇಳಿಕೆಯು, ಅದು ಒಂದೇ ಅರ್ಥ ಭಾವನೆಯುಳ್ಳದ್ದಾಗಿ, ಇದನ್ನು ಯೆಶಾಯ 53:4 ರಿಂದ ತೆಗೆದುಕೊಳ್ಳಲಾಗಿದೆ. NASB ಯಲ್ಲಿ ಇದನ್ನು ಹೀಗೆ ಅನುವಾದಿಸಲಾಗಿದೆ: "ನಿಜವಾಗಿಯೂ ನಮ್ಮ ಬೇನೆಗಳನ್ನು ತಾನೇ ಹೊತ್ತುಕೊಂಡನು, ಮತ್ತು ನಮ್ಮ ದುಃಖವನ್ನು ತೆಗೆದುಕೊಂಡನು." Albert Barnes ರವರು ಹೀಗೆ ವಾದಿಸಿದ್ದಾರೆ, "ಸಂಕಷ್ಟಗಳು ಯೆಶಾಯ ಪುಸ್ತಕದಲ್ಲಿ ಅನುವಾದಿಸಲಾಗಿದೆ, ಮತ್ತು ಮತ್ತಾಯ ಸುವಾರ್ತೆಯಲ್ಲಿ ಇದು ದೃಢವಿಲ್ಲದ್ದಾಗಿದೆ, ಅಂದರೆ ಅದರ ಅರ್ಥ ನಿರ್ದಿಷ್ಟವಾಗಿ ಇಲ್ಲ, ಹಿಬ್ರೂ ಮತ್ತು ಗ್ರೀಕ್ ಭಾಷೆಯಲ್ಲಿ, ದೇಹದ ರೋಗಗಳು ... ಬೇನೆಗಳನ್ನು ಆತನು ಹೊತ್ತುಕೊಂಡನು ಸ್ಪಷ್ಟವಾಗಿ ಇದೆ ಅವೆಲ್ಲವನ್ನು ದೂರತೆಗೆದು ಹಾಕಲು, ಹೊತ್ತುಕೊಂಡನು ಅಥವಾ ಅವುಗಳನ್ನು ತೆಗೆದುಬಿಡುವದಕ್ಕೆ ಹೊತ್ತುಕೊಂಡನು."[20] Lewis ರವರು ಬರೆ ಯುತ್ತಾರೆ, "ಆತನ ಸ್ವಸ್ಥತಾ ಕಾರ್ಯದಲ್ಲಿ ಯೇಸು ತನ್ನನ್ನು 'ಕರ್ತನ ಸೇವಕನೆಂದು' ತನ್ನ ಪಾತ್ರವನ್ನು ನಿರ್ವಹಿಸಿದ್ದಾನೆ ಅದನ್ನೇ ಯೆಶಾಯನು ವರ್ಣಿಸಿದ್ದಾನೆ."[21]

ಯೆಶಾಯನು ಹೇಳಿರುವ ಮಾತು ಬಹುಶಃ ಅದು ಯೇಸುವನ್ನು ಸೂಚಿಸುತ್ತದೆ ಅಂತಿಮವಾಗಿ ಪಾಪದ ಮೇಲೆ ಜಯವು ಅದು ಶಿಲುಬೆ ಮೇಲೆ ಆಗುವದು. ಇದೆಲ್ಲದರ ನಂತರ, ಯೆಶಾಯ 53ರ ಸನ್ನಿವೇಶವು ಮೆಸ್ಸೀಯನ ಪ್ರಾಯಶ್ಚಿತ್ತವನ್ನು ಭವಿಷ್ಯವನ್ನು ನುಡಿದಿರುತ್ತದೆ. D. A. Carson ರವರು ಬರೆದಿದ್ದಾರೆ, "ಮತ್ತಾಯನು ಅರ್ಥಮಾಡಿಕೊಂಡಿದ್ದನು

ಏನೆಂದರೆ ಯೇಸುವಿನ ಅದ್ಭುತಕಾರ್ಯಗಳು ಕೇವಲ ಆತನ ಬಲದಿಂದ ಮಾಡಿರುವ ಕಾರ್ಯಗಳಲ್ಲ, ಆದರೆ ಯೇಸು ಮಾಡಿರುವದು ಪ್ರಾಯಶ್ಚಿತಕ್ಕಾಗಿ ಮರಣಹೊಂದುವ ಕಾರ್ಯ ಅದು ನೆರವೇರುವ ತನಕ ತನ್ನ ಕೆಲಸವೆಂದೆ ಮಾಡಿದನು."[22] Morris ರವರು ತಿಳಿಯಪಡಿಸಿದ್ದಾರೆ, "ಅಲ್ಲಿ ನಿಶ್ಚಯವಾಗಿ ಅಸ್ವಸ್ಥತೆಗೆ ಅಂತಿಮ ಉತ್ತರ ಶಿಲುಬೆಯಲ್ಲಿ."[23] John Phillips ರವರು ಈ ಮುಖ್ಯವಾದ ಅವಲೋಕನ ಮಾಡಿದ್ದಾರೆ:

> ಶಿಲುಬೆಯ ಮೇಲೆ ಅಸ್ವಸ್ಥತೆ ವಿಷಯ ಕ್ರಿಸ್ತನ ಕುರಿತಾಗಿ ನಾವು ಮಾತಾಡುವಾಗ ಬಹಳ ಎಚ್ಚರವುಳ್ಳವರಾಗಿರಬೇಕು. ಪ್ರಾಯಶ್ಚಿತದಲ್ಲಿ ನಮಗಾಗಿ ಶಾರೀರಿಕ ಸ್ವಸ್ಥತೆ ತಕ್ಷಣವೇ ನಮಗಾಗಿ ಭದ್ರಪಡಿಸಿ ಇಡಲಾಗಿದೆ ಎನ್ನುವ ಅರ್ಥವಲ್ಲ. ಜನರು ಅದನ್ನು ಬೋಧಿಸುವವರ ತಪ್ಪಾಗಿದೆ. ಅವರು ಮಾನಸಿಕವಾಗಿರುವ ವಿಷಯ ಮಾತಾಡುವಾಗ ಅವರು ತಪ್ಪಾಗಿ ಬೋಧಿಸುವರು ಸ್ವಸ್ಥತೆ ಇಂದು ಸಹ ದೊರೆಯುತ್ತದೆ ಮತ್ತು ಯಾರು ಸ್ವಸ್ಥವಾಗುವದಿಲ್ಲವೋ ಅವರಲ್ಲಿ ನಂಬಿಕೆ ಕೊರತೆ ಇದೆ ಇದನ್ನು ಹೇಳುವಾಗ ಇದಕ್ಕೆಲ್ಲ ಅವರೆ ಹೇಳುವವರು ಜವಾಬ್ದಾರರು. ಮರಣದಿಂದ ನಿತ್ಯತ್ವ ನಮಗೆ ಭರವಸೆಯಾಗಿ ಕೊಟ್ಟಿರುವ ಹಕ್ಕಲ್ಲ, ಇಲ್ಲವೆ ದೈಹಿಕ ಸ್ವಸ್ಥತೆಗೆ ಭರವಸೆ ಅಲ್ಲ. ಅಂತಿಮವಾಗಿ ರೋಗ ದಿಂದ ಬಿಡುಗಡೆ ಮತ್ತು ಮರಣದ ಮೇಲೆ ಜಯ (ಪ್ರಕಟಣೆ 21:4) ಶಿಲುಬೆಯ ಮುಖಾಂತರವೇ - ಆದರೆ ಅದು ಪೌಲನು ಹೇಳಿದಂತೆ ಎದುರುನೋಡುತ್ತೇವೆ ಅದನ್ನು ಪೌಲನು ಕರೆದದ್ದು "ನಮ್ಮ ದೇಹಕ್ಕೆ ವಿಮೋಚನೆ" (ರೋಮಾಪುರ 8:22-23).[24]

ಕ್ರಿಸ್ತನ ಸೇವೆಯು ಈ ಲೋಕದಲ್ಲಿರುವ ಜನರ ಆತ್ಮೀಕ ಅಗತ್ಯತೆಗೆ ಸ್ಪಂದಿಸುವದು ಆಗಿತ್ತು; ಆದರೆ ಆತನ ಅದ್ಭುತ ಕಾರ್ಯಗಳು ವಿಶೇಷವಾಗಿ ಸ್ವಸ್ಥತೆಗಳು, ನಮ್ಮ ಪಾಪದಿಂದ ಸ್ವಸ್ಥವಾಗುವದರ ಆಳವನ್ನು ವಿವರಿಸುತ್ತದೆ ಮತ್ತು ನಮ್ಮನ್ನು ಸಂಪೂರ್ಣ ಮಾಡಲು ಆತನ ಬಲವು ಮಾಡಿರುವಂಥದ್ದು ವಿವರಿಸುತ್ತದೆ. "ಅವರು ನಮಗೆ ದೇವರ ಹೃದಯದಿಂದ ಬಂದಿರುವ ಆಶ್ಚರ್ಯಕರವಾದ ಪ್ರಕಟಣೆ ಕೊಟ್ಟಿದ್ದಾರೆ."[25] ಮತ್ತು ಆತನು ತನ್ನ ಜನರಿಗಾಗಿ ಸರಿಸಾಟಿಯಿಲ್ಲದ ಪ್ರೀತಿಹೊಂದಿರುವದನ್ನು ನೆನಪುಮಾಡುತ್ತಾನೆ.

### ಪಾಠಗಳು

## ಅದ್ಭುತಗಳು (ಅಧ್ಯಾಯ 8)

"ಅದ್ಭುತವು" ಅದು ಧರ್ಮೋಪದೇಶದ ಸ್ವರೂಪದಿಂದ ಆ ಘಟನೆಯನ್ನು ವಿವರಿಸಲಾಗದು ಮತ್ತು ಅಲೌಕಿಕ ಮೂಲದಿಂದ ಅಥವಾ ದೇವರ ಕಾರ್ಯದಿಂದ ಅದು ಆಗುವಂಥದ್ದು.[26] C. S. Lewis ರವರು ಸಮೀಕರಿಸಿದ್ದಾರೆ. ಒಂದು "ಅದ್ಭುತವು" "ಅದು ಅಲೌಕಿಕ ಬಲದಿಂದ ಅದರ ಸ್ವಾಭಾವಕ್ಕೆ ಅಡ್ಡಿ ಬರುವಂಥದ್ದು."[27] ಇನ್ನು ಸಂಪೂರ್ಣ ಗುಣಲಕ್ಷಣವು *The Westminster Dictionary of the Bible* ನಲ್ಲಿ ಕಂಡುಕೊಳ್ಳಬಹುದು:

> ಸಂಕುಚಿತ ಸಂದೇಶ ಹೊಂದಿರುವ ಸತ್ಯವೇದದ ಪ್ರಜ್ಞೆಯಲ್ಲಿ, ಅದ್ಭುತಗಳು ಹೊರಗಿನ ಲೋಕದ ಘಟನೆಗಳು, ದೇವರ ಬಲದಿಂದ ತಕ್ಷಣವೇ ರೂಪಿತವಾಗಿರುವಂಥದ್ದು ಮತ್ತು ಸೂಚನೆ ಅಥವಾ ದೃಢೀಕರಣದ ಹಾಗೆ ಉದ್ದೇಶವಿದೆ. ಅವುಗಳು ಸಾಧ್ಯವಿದೆ ಯಾಕೆಂದರೆ ದೇವರು ಸಂರಕ್ಷಣೆ ಮಾಡುವನು, ಹತೋಟಿಯಲ್ಲಿಡುವನು, ಮತ್ತು ಎಲ್ಲಾ ವಿಷಯಗಳಲ್ಲಿ ಮಾರ್ಗದರ್ಶನ ಮಾಡುವನು, ಮತ್ತು ಆತನು ಏಕಾಂತನು ಮತ್ತು ಸರ್ವಶಕ್ತನು ಆಗಿದ್ದಾನೆ.[28]

ಸತ್ಯವೇದದ ಪ್ರಕಾರ, ದೇವರು ಸಾಂದಾರ್ಭಿಕವಾಗಿ ನೈಸರ್ಗಿಕ ನಿಯಮಗಳನ್ನು

ಇಟ್ಟಿದ್ದಾನೆ ಮತ್ತು ತನ್ನ ದೈವ ಶಕ್ತಿಯಿಂದ ಅವುಗಳ ಆಚೆ ಕಾರ್ಯಗಳನ್ನು ನೆರವೇರಿಸುತ್ತಾನೆ. ಸತ್ಯವೇದದ ಅದ್ಭುತಗಳು ಸ್ಥಗಿತಗೊಂಡದಿಂದನಿಂದ (ನೋಡಿರಿ 1 ಕೊರಿಂಥ 13:8-10), ಇಂಥಹ ಅದ್ಭುತ ಕಾರ್ಯಗಳನ್ನು ಇಂದು ಮಾಡುತ್ತೇವೆಂದು ಹೇಳಿಕೊಳ್ಳುವವರು ಮೋಸ ಗಾರರು ಮತ್ತು ಅವರೇ ಮೋಸಮಾಡಿಕೊಳ್ಳುವವರು ಆಗಿದ್ದಾರೆ.

ಅದ್ಭುತಗಳನ್ನು ಮಾಡುವದು ಅಪೊಸ್ತಲರಿಗೆ ಮತ್ತು ಇತರರಿಗೆ ಕೊಟ್ಟಿರುವ ಉದ್ದೇಶ ಅವರು ಸಾರುವ ಸುವಾರ್ತೆಗೆ ದೃಢಪಡಿಸುವದಕ್ಕಾಗಿ (ಮಾರ್ಕ 16:17-20; ಇಬ್ರಿಯ 2:2-4). ಕೆಲವರು ಹೀಗೆ ಆಗ್ರಹಮಾಡುತ್ತಾರೆ ಅದ್ಭುತಗಳು ಇಂದು ಅವಶ್ಯ ಇನ್ನು ಅವಶ್ಯಕವಾಗಿದೆ ಅದರಿಂದ ಜನರಿಗೆ ಸತ್ಯವೇದವು ದೇವರ ಮಾತುಗಳೆಂದು ತಿಳಿಸಿಹೇಳಲು ಸಾದ್ಯವಾಗುತ್ತದೆ. ಯೋಹಾನನು ಬರೆದಿದ್ದಾನೆ. ಸತ್ಯವೇದದಲ್ಲಿ ಬರೆದಿರುವ ಅದ್ಭುತಗಳು ನಂಬಿಕೆಯನ್ನು ಹುಟ್ಟಿಸಲು ಸಾಕಾಗುತ್ತವೆ (ಯೋಹಾನ 20:30, 31). ದೇವರ ವಾಕ್ಯ ಕೇಳುವದರಿಂದ ನಂಬಿಕೆಯು ಹುಟ್ಟುತ್ತದೆ (ರೋಮಾಪುರ 10:17), ಅದ್ಭುತಗಳನ್ನು ನೋಡುವದರಿಂದ ಅಲ್ಲ, ಅನೇಕರು ಕ್ರಿಸ್ತನ ಅದ್ಭುತಗಳನ್ನು ನೋಡಿದವರು ನಂಬಲಿಲ್ಲ (12:22-24). ದೇವರು ಇಂದಿಗೂ ಕಾರ್ಯಮಾಡುತ್ತಿದ್ದಾನೆ, ಆದರೆ ಆತನು ದೈವಿಕತೆ ಹೊದಗಿಸುವದರ ಮುಖಾಂತರ ಆತನು ಸೃಷ್ಟಿಸಿದ ಸ್ವಾಭಾವಿಕ ಕ್ರಮಾಸನುಸಾರ ಮಾಡುತ್ತಾನೆ.

## ಕುಷ್ಠ (8:1-4)

ಹೆಚ್ಚಾಗಿ, ಸತ್ಯವೇದದ ಸಮಯದಲ್ಲಿ ಅನೇಕ ರೋಗಗಳು ಕುಷ್ಠ ರೋಗಕ್ಕಿಂತ ಕಡಿಮೆಯಾಗಿಯೇ ಇದ್ದವು. ಕಾಣಿಸುವದೆಲ್ಲವು ಕುಷ್ಠರೋಗವಾಗಿರುವದಿಲ್ಲ ನಿಜವಾದ ರೋಗವು ಬೇರೆಯಾಗಿರುತ್ತದೆ. ಅಲ್ಲಿರುವ ಪದ್ಧತಿ ಒಬ್ಬ ಕುಷ್ಠನು ಯಾಜಕನಿಂದ ಪರೀಕ್ಷೆಮಾಡಿಸಿಕೊಳ್ಳಬೇಕಾಗಿರುವದು ಮುಖ್ಯಾವಾದದ್ದಾಗಿದೆ ಯಾಜಕಕಾಂಡ 14:1-32 ಅಲ್ಲಿಯವರೆಗೆ ಯಾರು ಆ ಸಮಯದಲ್ಲಿ ರೋಗದಿಂದ ಗುಣವಾಗುತ್ತಿರಲಿಲ್ಲ, ಒಬ್ಬ ವ್ಯಕ್ತಿ ಒಂದು ವೇಳೆ ಗುಣವಾದರೆ ಅದು ದೇವರ ಕೃಪೆಯಿಂದಲೆ (2 ಅರಸುಗಳು 5:1-19; ಲೂಕ 4:27). ಒಂದು ವೇಳೆ ಸ್ವಚ್ಛತೆ ಆಗಿದ್ದರೆ, ಅಲ್ಲಿ ನಿಶ್ಚಯವಾಗಿ ಒಂದು ಪದ್ಧತಿ ಇತ್ತು ಅವನು ಗುಣಹೊಂದಿದವನನ್ನು ಸಮಾಜಕ್ಕೆ ಪುನಃ ಒಪ್ಪಿಸಿಕೊಡುತ್ತಿದ್ದರು. ಅದ್ಭುತಗಳು ಅಪರೂಪವಾಗಿದ್ದವು (ಅರಣ್ಯಕಾಂಡ 12:13-15; 2 ಅರಸು 5:9-14). ಕೆಲವು ಸಾರಿ ಕುಷ್ಟವು ನೇರವಾಗಿ ದೇವರ ಕಾರ್ಯದ ನಿಮಿತ್ತವೆ ಬರುತ್ತಿತ್ತು (ಅರಣ್ಯಕಾಂಡ 12:9-15).

ಕುಷ್ಟ ಹೊಂದಿದವರು ಧರ್ಮಶಾಸ್ತ್ರದ ಆ ದಿನದಲ್ಲಿ ಒಂದು ರೀತಿಯಾಗಿ ಕೃಪೆಗೆ ಅದಿನ ರಾಗಿದ್ದರು. ಪಾಪವು ಒಬ್ಬನನ್ನು ದೇವರಿಂದ ಮತ್ತು ತನ್ನ ಜನರಿಂದ ಬೇರೆ ಮಾಡುತ್ತದೆ (ಯೆಶಾಯ 59:1, 2), ಒಬ್ಬ ಕುಷ್ಟನನ್ನು ಸಮಾಜದಿಂದ ದೂರಮಾಡಿದಂತೆಯೇ ಮಾಡುತ್ತದೆ. ಪಾಪದಿಂದ ಬೇರ್ಪಡಿಸುವದು ತಾತ್ಕಾಲಿಕವಾಗಿರಬಹುದು ಅಥವಾ ಶಾಶ್ವತವಾಗಿರಬಹುದು (2 ಥೆಸಲೋನಿಕ 1:6-9). ಈ ಬೇರ್ಪಡುವಿಸುವಿಕೆ ಅಂದರೆ ಏನು ಎನ್ನುವದು ಜನರು ಅರ್ಥಮಾಡಿಕೊಳ್ಳದೆ ಇರಬಹುದು, ಆದರೆ ನ್ಯಾಯ ತೀರ್ಪಿನ ನಂತರ ಅವರಿಗೆ ಗೊತ್ತಾಗುತ್ತದೆ (25:41, 46). ಪಾಪವೆನ್ನುವ ರೋಗಕ್ಕಾಗಿ ಸ್ವಸ್ಥತೆ ಇದೆ. ಇದು ಕ್ರಿಸ್ತನ ರಕ್ತವಾಗಿದೆ ಆತ್ಮಕ್ಕೆ ಅನ್ವಹಿಸುತ್ತದೆ (ಎಫೆಸ 1:7; ಕೊಲೆಸ್ಸೆ 1:20; ಪ್ರಕಟಣೆ 1:5).

## ಆಶ್ಚರ್ಯವಾದ ನಂಬಿಕೆ (8:5-13)

ಈ ಕಥೆಯಲ್ಲಿ ರೋಮನ್ ಶತಾಧಿಪತಿಯಿಂದ ಅನೇಕ ಉತ್ತಮ ಸ್ವಾಭಾವಗಳ ನಡೆದುಕೊಂಡಿದ್ದಾನೆ. (1) ಆ ಮನುಷ್ಯನು ಪ್ರಭಾವ ಮತ್ತು ಅಧಿಕಾರದಿಂದ ಇದ್ದವನು, ಕಪೆರ್ನೌಮಿನಲ್ಲಿ ಅನೇಕ ಜನರ ಗೌರವಕ್ಕಾಗಿ ಈತನು ಆಜ್ಞೆಮಾಡಿದನು ಎನ್ನುವದರಲ್ಲಿ ಯಾವುದೇ ಸಂಶಯವಿಲ್ಲ. (2) ಆತನು ಪ್ರಭಾವವುಳ್ಳ ಮನುಷ್ಯನಾಗಿದ್ದರೂ, ಆತನು ತಗ್ಗಿದ

ದೀನ ಮನಸ್ಸಿನವನು ಸಹ ಆಗಿದ್ದನು. ಅವನು ಯೇಸುವಿಗೆ "ಪ್ರಭುವೇ, ನೀನು ನನ್ನ ಮನೆಗೆ ಬರತಕಷ್ಟು ಯೋಗ್ಯತೆ ನನ್ನಲ್ಲಿಲ್ಲ; ಎಂದು ಹೇಳಿದನು" (8:8). (3) ಈ ಶತಾಧಿಪತಿಯು ಯೆಹೂದ್ಯ ರಾಷ್ಟ್ರವನ್ನು ಪ್ರೀತಿಸುವವನಾಗಿದ್ದನು (ಲೂಕ 7:5). ಆತನು ವಿಗ್ರಹ ಆರಾಧನೆಯಲ್ಲಿ ಹುಟ್ಟಿಬಂದಾಗ್ಯೂ, ಆತನು ಸಹಜವಾಗಿ "ದೇವರಿಗೆ ಭಯಪಡು"ವವನಾದನು. (4) ಆತನು ಉದಾರಮನಸ್ಸಿನ ವ್ಯಕ್ತಿಯಾಗಿದ್ದನು (ಲೂಕ 7:5). ಕಡಿಮೆ ಪ್ರಮಾಣದಲ್ಲಿ, ಇದರ ಅರ್ಥ ಬಹುಶಃ ಆತನು ಯೋಜನೆಗೆ ಧನಸಹಾಯ ಮಾಡಿರಬಹುದು. (5) ಈ ಎಲ್ಲಾ ಉತ್ತಮ ವಾದ ಗುಣಲಕ್ಷಣಗಳೊಂದಿಗೆ, ಆತನು ದೊಡ್ಡ ನಂಬಿಕೆಯುಳ್ಳ ವ್ಯಕ್ತಿಯಾಗಿದ್ದನು. ಆತನು ಯೇಸುವಿಗೆ "ಒಂದು ಮಾತು" ಹೇಳಲು ಕೇಳಿಕೊಂಡನು ದೂರದಿಂದಲೆ ಅವನ ಆಳನ್ನು ಸ್ವಸ್ಥಮಾಡಬೇಕಾಗಿತ್ತು (8:8). ಯೇಸು "ಆಶ್ಚರ್ಯಪಟ್ಟನು" ಶತಾಧಿಪತಿಯನ್ನು ನೋಡಿ ಹೇಳಿದನು, "ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿಯೂ ಕಾಣಲಿಲ್ಲವೆಂದನು" (8:10). ನಮ್ಮ ನಂಬಿಕೆ ಯೇಸು ನೋಡಿ ಏನು ಹೇಳುತ್ತಾನೆ? David Stewart

## ಸೇವೆ ಮಾಡುವದಕ್ಕೆ ರಕ್ಷಿಸು (8:14, 15)

ಪೇತ್ರನು ಅತ್ತೆಯು ಸ್ವಸ್ಥವಾದ ತಕ್ಷಣವೇ ಆಕೆ ಯೇಸುವನ್ನು ಮನೆಯಲ್ಲಿ ಸೇರಿ ಬಂದಿರುವ ಇತರರನ್ನು ಉಪಚರಿಸಿದಳು (ನೋಡಿರಿ ಲೂಕ 4:39). ಯಜಮಾನನ ಸ್ಪರ್ಷವು ಆಕೆಯ ಜೀವಿತದಲ್ಲಿ ಬದಲಾವಣೆ ಮಾಡಿತು. ಕ್ರಿಸ್ತನಿಂದ ನಮ್ಮ ಆತ್ಮೀಕ ಸ್ವಸ್ಥತೆಯಾಗುವಾಗ ಅದರ ಫಲವಾಗಿ ನಮ್ಮಲ್ಲಿ ಒಳ್ಳೆಯ ಕಾರ್ಯಗಳು ಮಾಡಬೇಕು; ನಾವು ಸೇವೆ ಮಾಡುವದಕ್ಕಾಗಿಯೇ ರಕ್ಷಿಸಲ್ಪಟ್ಟಿದ್ದೇವೆ. ಅದನ್ನು ಒತ್ತಿ ಹೇಳಿದ ಮೇಲೆ ನಾವು ಕ್ರಿಸ್ತನ ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆ. ಪೌಲನು ಅದನ್ನು ಹೀಗೆ ಮುಕ್ತಾಯ ಮಾಡಿದ್ದಾನೆ, "ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೆ ನೇಮಿಸಿದನು" (ಎಫೆಸ 2:10). David Stewart

## ರೋಗದ ಮೂಲ (8:16, 17)

ರೋಗವಿದ್ದವರನ್ನು ಆತನು ಗುಣಪಡಿಸುವದು ಯೇಸುವಿನ ಸೇವೆಯ ಒಂದು ಭಾಗ ಅದು "ಕರ್ತನ ಸೇವಕ" ನಂತೆಯೆ ಮಾಡಿದನು (ಯೆಶಾಯ 53:4), ಆತನು ಈ ಲೋಕಕ್ಕೆ ಯಾಕೆ ಬಂದನು ಎಂಬುದಕ್ಕೆ ಇದುವೆ ಅಂತಿಮವಾದ ಮುಕ್ತಾಯವಾಗಿರಲಿಲ್ಲ. Hagner ರವರು ಹೀಗೆ ವಿವರಿಸಿದ್ದಾರೆ, "ರೋಗವು ನಿಜವಾದ ವೈರಿಯಲ್ಲ ಅದನ್ನು ಗೆಲ್ಲಲೇಬೇಕು: ಆ ವೈರಿ ಪಾಪ, ಬಿದ್ದು ಹೋಗುವ ಈ ಪ್ರಪಂಚ ಈ ಸುಳ್ಳಿನ ಪಾಪದಿಂದ ಹುಟ್ಟಿದೆ ಅಂತಿಮವಾಗಿ ಸಂಕಟ ಮತ್ತು ಅನಾರೋಗ್ಯ ಈ ಕಾಲದಲ್ಲಿರುವದು ಅದರ ಹಿನ್ನಲೆಯಿಂದಲೆ ಬಂದದ್ದಾಗಿದೆ."[29] ಯೇಸು ಶಿಲುಬೆ ಮೇಲೆ ಯಾವಾಗ ಸತ್ತನೋ, ಆಗಲೇ ಆತನು ಪಾಪಗಳ ಕ್ಷಮಾಪಣೆಗಾಗಿ ತನ್ನ ರಕ್ತವನ್ನು ಸುರಿಸಿದನು (26:28). ಯಾರು ನಮ್ಮಲ್ಲಿ ದೀಕ್ಷಾಸ್ನಾನದಲ್ಲಿ ಈ ರಕ್ಷಿಸುವ ರಕ್ತವನ್ನು ಸಂಪರ್ಕಿಸುತ್ತಾರೋ (ಅಪೊಸ್ತಲರ ಕೃತ್ಯಗಳು 2:38; ರೋಮಾಪುರ 6:3, 4; ಪ್ರಕಟಣೆ 7:14) ಮತ್ತು ಅವರು ನಿರಂತರವಾಗಿ ಅದರಿಂದ ಶುದ್ಧರಾಗುತ್ತಾರೆ (1 ಯೋಹಾನ 1:9) ಅವರು ಅಂತಿಮವಾಗಿ ನಾವು ದೇಹವನ್ನು ಸ್ವೀಕರಿಸುವರು (1 ಕೊರಿಂಥ 15:50-57; 1 ಯೋಹಾನ 3:2). ನಾವು ಪರಲೋಕದಲ್ಲಿ ದೇವರೊಂದಿಗೆ ನಿತ್ಯವು ಅಲ್ಲಿರುತ್ತೇವೆ, ಅಲ್ಲಿ ಮತ್ತೊಂದಾವರ್ತಿ ಮರಣವಿಲ್ಲ, ಗುಣಗುಟ್ಟುವಿಕೆ ಇಲ್ಲ, ಅಳುವದು ಇಲ್ಲ, ಅಥವಾ ನೋವಿಲ್ಲ (ಪ್ರಕಟಣೆ 21:4). David Stewart

ಟಿಪ್ಪಣಿಗಳು

[1]*Leviticus Rabbah* 16.6, 7; 17.3; *Numbers Rabbah* 7.5; 16:6; *Deuteronomy Rabbah* 6.8. [2]Robert H. Mounce, *Matthew*, New International Biblical Commentary (Peabody, Mass.: Hendrickson Publishers, 1991), 73. [3]ನೋಡಿರಿ James F. Strange ಮತ್ತು Hershel Shanks, "Has the House Where Jesus Stayed in Capernaum Been Found?" ಮತ್ತು "Synagogue Where Jesus Preached Found at Capernaum," in *Archaeology and the Bible: The Best of BAR*, vol. 2, *Archaeology in the World of Herod, Jesus and Paul*, ed. Hershel Shanks and Dan P. Cole (Washington, D.C.: Biblical Archaeology Society, 1990), 188-99, 200-7. [4]Tacitus *Annals* 4.5. ನೋಡಿರಿ Everett Ferguson, *Backgrounds of Early Christianity*, 2d ed. (Grand Rapids, Mich.: Wm. B. Eerdmans Publishing Co., 1993), 46-48. [5]David Hill, *The Gospel of Matthew*, The New Century Bible Commentary (Grand Rapids, Mich.: Wm. B. Eerdmans Publishing Co., 1972), 158. [6]Leon Morris, *Luke*: *An Introduction and Commentary,* rev. ed., The Tyndale New Testament Commentaries (Grand Rapids, Mich.: Wm. B. Eerdmans Publishing Co., 1988), 151. [7]ಯೋಹಾನನ ಸುವಾರ್ತೆಯಲ್ಲಿ ಇದಕ್ಕೆ ಸಮನಾಂತರವಾಗಿರುವ ಕಥೆ ಒಳಗೊಂಡಿದೆ "ರಾಜ ವೈಭವದ ಅಧಿಕಾರಿ" ಇದು ಕಪೆರ್ನೌಮಿನಲ್ಲಿ ಆಗಿರುವಂಥದ್ದು (ಯೋಹಾನ 4:46-54). ಹಾಗಿದ್ದರೂ, ಅಲ್ಲಿ ಉಪಯೋಗಿಸುವ ಶಬ್ದ "ಮಗ" ಎಂದು ಇದೆ (*huios*), ಆದರೆ "ಗುಲಾಮ" ಎಂಬುದಾಗಿ ಉಪಯೋಗಿಸಿಲ್ಲ. [8]Douglas R. A. Hare, *Matthew*, Interpretation (Louisville: John Knox Press, 1993), 90. [9]Mounce, 74. [10]Mishnah *Oholoth* 18.7.

[11]Hare, 91. [12]S. Scott Bartchy, "Table Fellowship," in *Dictionary of Jesus and the Gospels*, ed. Joel B. Green and Scot McKnight (Downers Grove, Ill.: InterVarsity Press, 1992), 796. [13]H. Leo Boles, *A Commentary on the Gospel According to Matthew* (Nashville: Gospel Advocate Co., 1936), 191. [14]Leon Morris, *The Gospel According to Matthew*, Pillar Commentary (Grand Rapids, Mich.: Wm. B. Eerdmans Publishing Co., 1992), 195. [15]Jack P. Lewis, *The Gospel According to Matthew*, Part 1, The Living Word Commentary (Austin, Tex.: Sweet Publishing Co., 1976), 123. [16]Donald A. Hagner, *Matthew 1-13*, Word Biblical Commentary, vol. 33A (Dallas: Word Books, 1993), 209. [17]ಯೆಹೂದ್ಯ ಧರ್ಮಗುರುಗಳು ಸುಮಾರು ಮುವತ್ತೊಂಬತ್ತು ವಿಷಯಗಳು ಸಬ್ಬತ್ ದಿನದಂದು ನಡೆಯಬಾರದು ಎಂದು ನಿಷೇಧಿಸಿದ್ದರು. ಇವುಗಳಲ್ಲಿ ಕೊನೆಯ ವಿಷಯ ವಿರೋಧವಾದ ವಿಷಯವಾಗಿತ್ತು "ಒಬ್ಬರು ಒಂದು ವಿಷಯವನ್ನು ಒಂದು ಅಧಿಪತ್ಯದಿಂದ ಇನ್ನೊಂದೆಡೆಗೆ ಸಾಗಿಸುವದು" (Mishnah *Shabbath* 7.2). ಒಬ್ಬ ಯೆಹೂದ್ಯ ಗುರು ಹೇಳಿದ್ದಾರೆ ವೈಯಕ್ತಿಕವಾಗಿ ಒಬ್ಬನು ಜೀವಂತವಾಗಿರುವಾಗಲೇ ಇವನು ಹಾಸಿಗೆಯಲ್ಲಿರುವಾಗಲೆ ತೆಗೆದುಕೊಂಡು ಸಾಗಿಸುವದು ವಿನಾಯಿತಿಗೆ ಒಳಪಟ್ಟಿದೆ. (Mishnah *Shabbath* 10.5.) ಆದಾಗ್ಯೂ ಇತರರು ಇದನ್ನು ವಿರುದ್ಧವಾದ ವಿಷಯವನ್ನಾಗಿ ತೆಗೆದುಕೊಂಡಿದ್ದಾರೆ. [18]*Testament of Solomon* 2.4; 5.5, 13; 8.5–11; Tobit 6:7, 8, 16–18; 8:2, 3; Josephus *Antiquities* 8.2.5. [19]Graham H. Twelftree, "Demon, Devil, Satan," in *Dictionary of Jesus and the Gospels*, ed. Joel B. Green and Scot McKnight (Downers Grove, Ill.: InterVarsity Press, 1992), 167. [20]Albert Barnes, *Notes on the New Testament: Matthew and Mark*, ed. Robert Frew (Philadelphia: N.p., 1832; reprint, Grand Rapids, Mich.: Baker Book House, 1974), 88. NRSVಯಲ್ಲಿ ಹೋಲಿಸಿ ಯೆಶಾಯ 53:4 ಮತ್ತು ಮತ್ತಾಯ 8:17.

[21]Lewis, 124. [22]D. A. Carson, *When Jesus Confronts the World: An Exposition of Matthew 8-10* (Grand Rapids, Mich.: Baker Book House, 1987), 33. [23]Morris, *Matthew*, 198. [24]John Phillips, *Exploring the Gospel of Matthew*: *An Expository Commentary*, The John Phillips Commentary Series (Grand Rapids, Mich.: Kregel Publications, 1999), 151. [25]William M. Taylor, *The Miracles of Our Savior* (New York: Doubleday, Doran & Co., 1928), 26. [26]*The American Heritage Dictionary,* 4th ed. (2001), s.v.

“miracle.” [27]C. S. Lewis, *Miracles*: *A Preliminary Study* (New York: Macmillan Co., 1947), 10. [28]Henry Snyder Gehman, ed., “Miracle,” *The New Westminster Dictionary of the Bible* (Philadelphia: Westminster Press, 1970), 622. [29]Hagner, 211.